ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 26 ಜೂನ್ 24, 1984 ಬೆಲೆ 60 ಪೈಸೆ.

ಜನತಾ ಸರಕಾರಕ್ಕೆ ಇನ್ನೂ ಹೆಚ್ಚು 'ಚಲನೆ' ಬೇಕು

— ಕಾ|| ಪಿ. ರಾಮಚಂದ್ರರಾವ್

ಶ್ರೀ ರಾಮಕೃಷ್ಣ ಹೆಗ್ಗಡೆಯವರ ಜನತಾ ಪಕ್ಷದ ಸರ್ಕಾರಕ್ಕೆ ಕರ್ನಾಟಕದಲ್ಲಿ ಇದೀಗ ಒಂದೂವರೆ ವರ್ಷ ತುಂಬಿದೆ. ಮಾನವನ ಶಿಶು ಕೂಡ ಒಂದೂವರೆ ವರ್ಷ ತುಂಬಿದಾಗ ಅಂಬೆ ಕಾಲಿಕ್ಕುತ್ತದೆ, ಚಲಿಸಲು ಪ್ರಯತ್ನಿಸುತ್ತದೆ. ಶ್ರೀ ಹೆಗ್ಡೆಯವರ ಸರ್ಕಾರದಿಂದಲೂ ಕರ್ನಾಟಕದ ಸಾಮಾನ್ಯ ಜನತೆ "ಚಲನೆ" ಯನ್ನು ಅಪೇಕ್ಷಿಸುತ್ತದೆ. ನಿಜವಾದ ಪ್ರಜಾಪ್ರಭುತ್ವ ಸರಕಾರವೊಂದರ ಪರೀಕ್ಷೆಯು "ಅದು ಜನರ ಸಮಸ್ಯೆಗಳಿಗೆ ಎಷ್ಟು ವೇಗವಾಗಿ ಮತ್ತು ಗಂಭೀರವಾಗಿ ಸ್ಪಂದಿಸುತ್ತದೆ" ಎಂಬುದರಲ್ಲಿ ಅಡಗಿದೆ. ಈ ಪರೀಕ್ಷಾ ದಂಡವನ್ನು ಹಚ್ಚಿ ನೋಡಿದರೆ ಹೆಗ್ಡೆಯವರ ಸರಕಾರವು "ಜನರ ಸಮಸ್ಯೆಗಳಿಗೆ ವೇಗವಾಗಿ ಸ್ಪಂದಿಸುತ್ತದೆ, ಆದರೆ ಗಂಭೀರವಾಗಿ ಸ್ಪಂದಿಸುವುದಿಲ್ಲ" ಎಂಬುದು ಗೋಚರವಾಗುತ್ತದೆ. ಅಂದರೆ ಯಾರಾದರೂ ಒಬ್ಬ ನಾಗರಿಕ ಅಥವ ಒಬ್ಬ ಶಾಸಕ ಅಥವ ಜನ ವಿಭಾಗ ಯಾವುದೇ ಸಮಸ್ಯೆಯನ್ನು ಪತ್ರ ಮುಖೇನ, ಬಾಯಿಮಾತಿನ ಮೂಲಕ, ಮನವಿ ಮಾಡುವುದರ ಮೂಲಕ ಅಥವ ಚಳವಳಿಯ ಮೂಲಕ ಸರಕಾರದ ಮುಂದೆ ತಂದಾಗ, ಸರಕಾರವು ಮಂತ್ರಿಗಳ ಮೂಲಕ— ಕೆಲವೊಮ್ಮೆ ಮುಖ್ಯ ಮಂತ್ರಿಗಳೇ ಸ್ವತಃ- ಸಮಸ್ಯೆಯನ್ನು "ನಾವು ಕೂಡಲೇ ಪರಿಗಣಿಸುತ್ತೇವೆ" ಎಂದು ಕೂಡಲೇ ಉತ್ತರಿಸುತ್ತಾರೆ. ಬಾಯ್ಮಾತಿನ ವಾಗ್ದಾನ ಮಾತ್ರವಲ್ಲ, ಸಂಬಂಧಪಟ್ಟವರನ್ನು ಸೇರಿಸಿ ಭಾಷಣ ಮಾಡುವುದರ ಮೂಲಕ ಮಾತ್ರವಲ್ಲ, ಬರವಣಿಗೆಯ ಮೂಲಕ ಕೂಡ ಭರವಸೆಯನ್ನೀಯುತ್ತಾರೆ ಇದು ಸ್ವಾಗತಾರ್ಹವಾದದ್ದು.

ಆದರೆ ಭರವಸೆ ಅಲ್ಲಿಗೇ ನಿಂತು ಹೋದರೆ.... ಹೇಗೆ ? ಇದೇ ಹೆಗ್ಡೆ ಸರ್ಕಾರ ಅನುಸರಿಸುತ್ತಿರುವ ರೀತಿಯಾಗಿದೆ. ಇದಕ್ಕಾಗಿಯೇ ನಾವು ಹೇಳುವುದು "ಹೆಗ್ಡೆಯವರ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಚಲನೆ ಬೇಕು ಎಂದು.

ಯಾಕೆ ಹೀಗೆ ?

ಮಂತ್ರಿಗಳು - ಮುಖ್ಯಮಂತ್ರಿಗಳು ಕೂಡ "ನಿಮ್ಮ ಸಮಸ್ಯೆಯನ್ನು ಪರಿಗಣಿಸುತ್ತೇವೆ ಎಂದು ಸಂಬಂಧಪಟ್ಟವರಿಗೆ ತಿಳಿಸಿದ ಮೇಲೆ, ಮಂತ್ರಿಗಳು ಮುಖ್ಯಮಂತ್ರಿಗಳು ಕೂಡ ಆ ಸಮಸ್ಯೆಯನ್ನು ಮರೆತು ಬಿಡುತ್ತಾರೆ. ಅವರನ್ನು ಇನ್ನೊಂದು ಸಮಸ್ಯೆ ಆ ನಂತರ ಮಗದೊಂದು ಸಮಸ್ಯೆ.... ಹೀಗೆ ಸಮಸ್ಯೆಗಳ ಮೇಲೆ ಸಮಸ್ಯೆಗಳು ಕಾಡುತ್ತಾ ಹೋಗುತ್ತವೆ. ಅವರು ಒಂದರ ನಂತರ ಇನ್ನೊಂದು ಸಮಸ್ಯೆಗೆ "ಪರಿಗಣಿಸಲಾಗುವುದು" ಎಂದು ಹೇಳುತ್ತಾ ಮುಂದುವರಿಯುತ್ತಾ ಹೋಗುತ್ತಾರೆ. ಕಾಲವು ಉರುಳುತ್ತದೆ, ದಿನ ಹೋಗಿ ವಾರ, ವಾರ ಹೋಗಿ ತಿಂಗಳುಗಳು ಉರುಳುತ್ತಾ ಹೋಗುತ್ತದೆ.

ಸಮಸ್ಯೆಯನ್ನು ಸರಕಾರದ ಮುಂದೆ ತಂದ ನಾಗರೀಕ, ಎಂ. ಎಲ್. ಎ. ಜನ ವಿಭಾಗ "ತಮ್ಮ ಸಮಸ್ಯೆಯ ಗಂಭೀರ ಪರಿಹಾರಕ್ಕಾಗಿ ಕಾದದ್ದೇ ಬಂತಲ್ಲದೆ ಪರಿಹಾರ ಕಾಣುವುದಿಲ್ಲ....

ಯಾಕೆ ಹೀಗಿದೆ ?

"ನಿಮ್ಮ ಸಮಸ್ಯೆಯನ್ನು ಪರಿಗಣಿಸಲಾಗುವುದು" ಎಂದು ಬಾಯ್ಮಾತು, ಭಾಷಣ, ಬರವಣಿಗೆಗಳ ಮೂಲಕ ತಿಳಿಸಿದ ನಂತರ ಮಂತ್ರಿಗಳು ಅಥವ ಮುಖ್ಯಮಂತ್ರಿಗಳು ಅದನ್ನು ತಮ್ಮ ನೌಕರಶಾಹಿ ಅಧಿಕಾರಿಗಳಿಗೆ ಸಿಬ್ಬಂದಿಗಳಿಗೆ "ಅವರ ಪರಿಶೀಲನೆಗೆ, ಅವರ ಟಿಪ್ಪಣಿಗಾಗಿ ಕಳುಹಿಸುತ್ತಾರೆ...."

"ನೌಕರಶಾಹಿ ಅಧಿಕಾರಿಗಳು ಬ್ರಿಟಿಶ್ ವಸಾಹತು ಶಾಹೀ ಆಡಳಿತಗಾರರಿಂದ ತರಬೇತಿಯಾದ ಸಿಬ್ಬಂದಿ ವರ್ಗದವರು ತಮ್ಮ ಪರಂಪರಾನುಗತ ನಿಧಾನಗತಿಯಿಂದ (ರೆಡ್ ಟೇಪಿಸಂ) ಆ ಸಮಸ್ಯೆಯನ್ನು ತಮ್ಮ ಪರಿಶೀಲನೆಗೆ ಗುರಿಪಡಿಸುತ್ತಾರೆ, ಆ ಸಮಸ್ಯೆಯ ಪರಿಹಾರಕ್ಕೆ ತಮ್ಮ ಟಿಪ್ಪಣಿಯನ್ನು ಬರೆಯುತ್ತಾರೆ.... ಯಾವುದೇ ರಾಜಕೀಯದ ಒತ್ತಡವಿಲ್ಲದೆ ಈ ಸಮಸ್ಯೆಗಳು ಹಾಗೆಯೇ ನಿಧಾನವಾಗಿ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಗೆ ಒಳಗಾಗಿಯೇ ಇರುತ್ತವೆ....

ಸಮಸ್ಯೆಯನ್ನು ಸರಕಾರದ ಮುಂದೆ ತಂದ ನಾಗರೀಕ, ಎಂ. ಎಲ್. ಎ. ಅಥವ ಜನ ವಿಭಾಗ "ಆ ಸಮಸ್ಯೆಯನ್ನು ಪತ್ರದ ರೂಪದಲ್ಲಿ ಹಾಕಿ, ಆ ಸಮಸ್ಯಾ ಪತ್ರದ ಹಿಂದೆ ಸತತವಾಗಿ ಸುತ್ತುತ್ತಿದ್ದರೆ. ಅಂದರೆ ಆಫೀಸರನೊಬ್ಬನ ಮೇಜಿನಿಂದ ಇನ್ನೊಬ್ಬ ಆಫೀಸರನ ಮೇಜಿಗೆ ಹೋದರೆ, ಒಬ್ಬ ಸಿಬ್ಬಂದಿಯಿಂದ ಇನ್ನೊಬ್ಬ ಸಿಬ್ಬಂದಿಯ ಬಳಿಗೆ ಹೋದರೆ, ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ, ಹಲವು ಬಾರಿ ಮಂತ್ರಿಗಳ ಬಳಿ. ಕೆಲವು ಬಾರಿ ಮುಖ್ಯಮಂತ್ರಿಗಳ ಬಳಿಗೆ ಹೋದರೆ, ಅವರೂ ಆ ಬಗ್ಗೆ ಅಷ್ಟು ಆಸಕ್ತರಾದರೆ, ಸಮಸ್ಯೆಗೆ ಪರಿಹಾರ ಸಿಗಬಹುದು.

ಈ ರೀತಿ ಸಮಸ್ಯಾ ಪತ್ರದ ಹಿಂದೆ ಸತತವಾಗಿ ಅಲೆದಾಡಲು ಒಬ್ಬ ನಾಗರಿಕನಿಗಾಗಲಿ, ಎಂ. ಎಲ್. ಎ. ಗಾಗಲಿ ಅಥವ ಜನ ವಿಭಾಗಕ್ಕಾಗಲೀ ಸಾಧ್ಯವಾಗುತ್ತದೆಯೇ ?

ಹೆಚ್ಚಿನ ಸಂದರ್ಭಗಳಲ್ಲಿ ಈ ಸಮಸ್ಯಾ ಪತ್ರಗಳು "ದಲ್ಲಾಳಿಗಳ" "ಮಧ್ಯವರ್ತಿಗಳ" "ನಿತ್ಯ ಈ ಕೆಲಸದಲ್ಲೇ ನಿರತರಾಗಿರುವವರ ಕೈಗೆ ಸೇರುತ್ತವೆ. ಆ ಮೂಲಕ ಆ ಸಮಸ್ಯಾ ಪತ್ರಗಳಲ್ಲಿರುವ ಸಮಸ್ಯೆಗಳಿಗೆ ಒಂದಲ್ಲ

(8ನೇ ಪುಟ ನೋಡಿ)

ಸಂಪಾದಕೀಯ

ಜನತಾ ಸರಕಾರಕ್ಕೂ ಮುಲ್ಕಿ ಹುಚ್ಚೆ ?

ಕೆಲವು ವರ್ಷಗಳ ಹಿಂದೆ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ "ಮುಲ್ಕಿ" ಚಳುವಳಿ ನಡೆಸಲಾಯಿತು. ತಮ್ಮ ಪ್ರದೇಶದಲ್ಲಿ ತಮ್ಮವರಿಗೆ ಮಾತ್ರ ನೌಕರಿ ಸಿಗಬೇಕೆಂಬ ಚಳುವಳಿ.

ಅಂಥದ್ದೇ ಚಳುವಳಿ ಅಸ್ಸಾಂನಲ್ಲಿ ನಡೆಯುತ್ತಿದೆ. ಅಸ್ಸಾಂ ಅಸ್ಸಾಂ ಜನರಿಗಾಗಿ ಮಾತ್ರ. ಬಾಳಠಾಕ್ರೆ ಹೇಳುತ್ತಾರೆ ಮಹಾರಾಷ್ಟ್ರ ಮಹಾರಾಷ್ಟ್ರೀಯರಿಗಾಗಿ. ವಾಟಾಳ್ ನಾಗರಾಜ್ ಹೇಳುವುದು ಕರ್ನಾಟಕ ಕನ್ನಡಿಗರದ್ದೇ ಎಂದು. ಕರ್ನಾಟಕ ಕನ್ನಡಿಗರದ್ದು, ಮಹಾರಾಷ್ಟ್ರ ಮರಾಠಿಗರದ್ದು, ಅಸ್ಸಾಂ ಅಸ್ಸಾಮಿಗಳದ್ದು, ಹೀಗೆ ಪ್ರತಿಯೊಂದು ಪ್ರಾಂತ ಆಯಾ ಪ್ರಾಂತದವರದ್ದಾದರೆ ಭಾರತದೇಶ ಯಾರದೆಂಬ ಪ್ರಶ್ನೆ ಉದ್ಭವವಾಗುವುದಿಲ್ಲವೇ ? ಇಂಥ ಸಂಕುಚಿತ ಭಾವನೆಗಳಿಗೆ ಪುಷ್ಟಿಕೊಟ್ಟು ಅಮೇರಿಕನ್ ಸಾಮ್ರಾಜ್ಯ ಶಾಹಿಗಳೂ ಕ್ರಿಶ್ಚನ್ ಮಿಶನರಿಗಳು ಪ್ರತ್ಯೇಕ ರಾಜ್ಯವಾಗಬೇಕೆಂದು ಆರಾಲಿಗಳ ತಲೆ ತುಂಬಿಸುತ್ತಿದ್ದಾರೆ. ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್ ಮಣಿಪುರ, ತ್ರಿಪುರ, ಸಿಕ್ಕಿಂ, ಮೊದಲಾದ ರಾಜ್ಯಗಳನ್ನೊಳಗೊಂಡ ಪ್ರತ್ಯೇಕ ರಾಜ್ಯ ಮಾಡಬೇಕೆಂದು ಅಸ್ಸಾಂ ಚಳುವಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಛಿದ್ರಕಾರಿ ಶಕ್ತಿಗಳು ವಿದೇಶಿಯರಿಂದ ಹಣ, ಶಸ್ತ್ರಾಸ್ತ್ರಗಳನ್ನು ಯಾವ ರೀತಿ ಪಡೆಯುತ್ತಿದ್ದಾರೆ, ದೇಶದ ಸಮಗ್ರತೆಯ ವಿರುದ್ಧ ಯಾವ ರೀತಿ ಒಳಸಂಚು ನಡೆಸುತ್ತಿದ್ದಾರೆಂಬುದಕ್ಕೆ ಪಂಜಾಬಿನ ಸ್ವರ್ಣಮಂದಿರದ ಘಟನೆಯೇ ಸಾಕ್ಷಿ.

ಆಯಾ ರಾಜ್ಯದವರು, ಆಯಾ ರಾಜ್ಯದ ಭಾಷೆ ಕಲಿಯಲೇಬೇಕು. ಆಯಾ ರಾಜ್ಯದ ಜನರಲ್ಲಿ, ಅವರ ಭಾಷೆ, ಸಂಸ್ಕೃತಿಗಳಲ್ಲಿ ಬೆರೆತುಕೊಳ್ಳಬೇಕು ಅಂಥ ಕ್ರಮ ಆಯಾ ರಾಜ್ಯದ ಸಮಗ್ರತೆಗೆ ಸಹಾಯವಾಗುತ್ತದೆ. ಕೆಳಮಟ್ಟದ ಸಮಗ್ರತೆ ದೇಶದ ಸಮಗ್ರತೆಯನ್ನು ಉಳಿಸಲು ಭದ್ರಗೊಳಿಸಲು, ಸಹಾಯವಾಗುತ್ತದೆ. ಅದೇ ಸಮಯದಲ್ಲಿ ಅಲ್ಪ ಭಾಷಿಕರಿಗೂ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು, ತಂತಮ್ಮ ಸಾಂಸ್ಕೃತಿಕ ಚಳುವಳಿಗಳನ್ನು ನಡೆಸಲು ಅವಕಾಶ ಒದಗಿಸುವುದೂ ಅಗತ್ಯ. ಭಾಷೆ, ಜಾತಿ, ಧರ್ಮಗಳು ಭಿನ್ನವಾಗಿದ್ದರೂ, ಅವುಗಳನ್ನೆಲ್ಲ ಹಮ್ಮಿಕೊಂಡು ಏಕತಾ ಭಾವನೆ ಬೆಳೆಸಿ ಆಯಾ ಭಾಷೆ ಸಂಸ್ಕೃತಿಗಳ ಬೆಳವಣಿಗೆ, ವಿಕಾಸಕ್ಕೆ ಸಂಪೂರ್ಣ ಅವಕಾಶ ಒದಗಿಸುವುದೂ ಅತ್ಯಗತ್ಯ.

ಕರ್ನಾಟಕದ ಜನತಾ ಸರಕಾರ ಈ ಮಹೋದ್ದೇಶ ಸಾಧನೆಯ ವಿರುದ್ಧ ಕ್ರಮ ಕೈಗೊಳ್ಳುತ್ತಿದೆ. ಕೇಂದ್ರ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚು ಕೆಲಸದ ಅವಕಾಶ ಯಾವ ರೀತಿ ಒದಗಿಸಲು ಸಾಧ್ಯವೆಂಬುದರ ಕುರಿತು ಶಿಫಾರಸ್ಸು ಮಾಡಲು ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ನೇಮಿಸಲಾಗಿತ್ತು. ಈ ಕಮಿಟಿಯವರು ಸಲ್ಲಿಸಿದ ತಾತ್ಕಾಲಿಕ ವರದಿಯನ್ನು ಎರಡು ದಿವಸಗಳೊಳಗಾಗಿಯೇ ಹೆಗಡೆ ಸರಕಾರ ಸಂಪೂರ್ಣ ಒಪ್ಪಿಕೊಂಡಿರುವುದು ಆಶ್ಚರ್ಯಕರ. ಈ ಕಮಿಟಿ ಶಿಫಾರಸಿನಂತೆ ಶೇ 80 ರಷ್ಟು ನೌಕರಿ ಕನ್ನಡಿಗರಿಗೇ ಸಿಗಬೇಕು. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳುವವರು ಕನಿಷ್ಠ 15 ವರ್ಷ ಕರ್ನಾಟಕದಲ್ಲೇ ವಾಸಿಸಿರಬೇಕು ಮತ್ತು ಕನ್ನಡ ತಿಳಿದವರಿರಬೇಕು. ಈ ನಿರ್ಣಯ ಹೋದ ವರ್ಷ ನಿರ್ಣಯದ ವಿರುದ್ಧವಾಗಿದೆ. ನೌಕರಿಗೆ ಸೇರಿದ ನಂತರ ಕಾಯಂ ಆಗಬೇಕಾದರೆ ಕನ್ನಡ ಕಲಿಯಲೇ ಬೇಕೆಂಬುದು ಹಳೇ ನಿರ್ಣಯವಾಗಿತ್ತು. ಅದಕ್ಕೆ ವ್ಯತಿರಿಕ್ತವಾಗಿದೆ ಈಗಿನ ನಿರ್ಣಯ.

ಸಂವಿಧಾನದ ಪ್ರಕಾರ ಒಂದು ಪ್ರದೇಶದಲ್ಲಿ 5 ವರ್ಷ ವಾಸವಾಗಿದ್ದವರಿಗೆ "ಡೊಮಿಸೈಲ್" ಸರ್ಟಿಫಿಕೇಟು ಸಿಗುತ್ತಿರುವಾಗ, ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸುವ ಹಕ್ಕು, 15 ವರ್ಷ ವಾಸವಾದವರಿಗಷ್ಟೆ ಮತ್ತು ಕನ್ನಡ ತಿಳಿದವರಿಗಷ್ಟೇ ಎಂಬ ನಿರ್ಣಯ ದೇಶದ ಸಮಗ್ರತೆಗೂ, ಸಂವಿಧಾನಕ್ಕೂ ವಿರುದ್ಧವಾಗಿದೆಂದೂ ಹೇಳಬೇಕಾಗುತ್ತದೆ.

ಆಯಾ ರಾಜ್ಯ ಪ್ರದೇಶಗಳಲ್ಲಿರುವ ಕೈಗಾರಿಕೆಗಳಲ್ಲಿ ಅಲ್ಲಿಯವರಿಗೆ ಪ್ರಾಶಸ್ತ್ಯ ಸಿಗಲೇಬೇಕು. ಅದೇ ಸಮಯದಲ್ಲಿ ಅಲ್ಲಿಯೇ ನೆಲೆಸಿರುವ ಇತರ ಪ್ರಾಂತದವರಿಗೆ, ಭಾಷಿಕರಿಗೆ, ಉದ್ಯೋಗ ಅವಕಾಶ ನಿರಾಕರಿಸುವುದು ಸರಿಯಲ್ಲ.

ದೇಶದ ಸಮಗ್ರತೆ, ಐಕ್ಯತೆ ಉಳಿಯಬೇಕಾದರೆ ಸಂಕುಚಿತ ಭಾವನೆಗಳನ್ನು ವಿರೋಧಿಸಬೇಕು. ಜನರಲ್ಲಿ ತಿಳುವಳಿಕೆ ಉಂಟುಮಾಡಬೇಕು.

ಇಂಥ ಸಮಸ್ಯೆಗಳ ಪರಿಹಾರಕ್ಕೆ ಸಮತಾವಾದ ಒಂದೇಮಾರ್ಗ ಸಮತಾವಾದಿ ತತ್ವಗಳನ್ನು ಪ್ರಚಾರಗೊಳಿಸಬೇಕು. ವರ್ಗ ಸಂಘಟನೆ ಬೆಳೆಸಬೇಕು. ಸಮಗ್ರತೆಯ ದೃಷ್ಟಿಕೋನವನ್ನುಂಟು ಮಾಡಬೇಕು.

ಆರ್ಥಿಕ ಸಮೀಕ್ಷೆ

— ಆರ್. ಚಂದ್ರ

ಗ್ರಾಮೀಣ ಉದ್ಯೋಗ ನಿರ್ಮಾಣದಲ್ಲಿ ಇಳಿಮುಖ

ಜನತಾ ಸರಕಾರದ ಅವಧಿಯಲ್ಲಿ (1977-79) ಪ್ರಾರಂಭಗೊಂಡ "ಕೆಲಸಕ್ಕೆ-ಕಾಳು" ಕಾರ್ಯಕ್ರಮವನ್ನು ದೇಶದ ಎಲ್ಲಾ ರಾಜ್ಯಗಳಿಗಿಂತ ಪ. ಬಂಗಾಳದ ಎಡರಂಗ ಸರಕಾರವು ಅತ್ಯಂತ ಯಶಸ್ವಿಯಾಗಿ ಜಾರಿಗೊಳಿಸಿ ಜನಪ್ರಿಯತೆ ಗಳಿಸಿರುವುದು ಎಲ್ಲರಿಗೂ ತಿಳಿದಿದೆ. ಆದರೆ 1980ರಲ್ಲಿ ಪುನಃ ಅಧಿಕಾರಕ್ಕೆ ಬಂದ ಇಂದಿರಾ ಗಾಂಧಿ ಸರಕಾರ ಈ ಕಾರ್ಯಕ್ರಮಕ್ಕೆ ರಾಜ್ಯ ಸರಕಾರಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನೂ ಹಣಕಾಸನ್ನೂ ಒದಗಿಸದೆ ಅಲಕ್ಷಿಸಿತು. ನಂತರ "ಕೆಲಸಕ್ಕೆ ಕಾಳು" ಕಾರ್ಯಕ್ರಮದ ಬದಲಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು (ಎನ್. ಆರ್. ಇ. ಪಿ) ಘೋಷಿಸಿತು. ನಾಲ್ಕು ವರ್ಷಗಳ ನಂತರ ಈ ಕಾರ್ಯಕ್ರಮದ ವಿಫಲತೆಯ ವರದಿ ಈಗ ಸಿಗುತ್ತಿದೆ. (ಎಸ್.ಎಸ್. ಅಯ್ಯರ್ ಅವರ ಲೇಖನ, ಇಂಡಿಯನ್ ಎಕ್ಸ್‌ಪ್ರೆಸ್: 15-5-1984) ವರ್ಷ ವರ್ಷಕ್ಕೆ ಗ್ರಾಮೀಣ ಉದ್ಯೋಗ ನಿರ್ಮಾಣ ಹೆಚ್ಚಾಗುವ ಬದಲು ಇಳಿಮುಖವಾಗುತ್ತಿದೆ.

ವರ್ಷ	ಮಿಲಿಯ ಮಾನವ ದಿನಗಳ ಗ್ರಾಮೀಣ ಉದ್ಯೋಗ ನಿರ್ಮಾಣ.		
1980-81	413·60 ,,	,,	,,
1981-82	354·52 ,,	,,	,,
1982-83	350·01 ,,	,,	,,
1983-84	300·00 ,, (ಅಂದಾಜು)	,,	,,

ಗ್ರಾಮೀಣ ಉದ್ಯೋಗ ನಿರ್ಮಾಣ ಇಳಿಮುಖವಾಗಲು ಕೆಲವು ಮುಖ್ಯ ಕಾರಣಗಳು :

1983 ಅಕ್ಟೋಬರ್‌ನ ಮೊದಲು ಗ್ರಾಮೀಣ ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳ ವೆಚ್ಚದಲ್ಲಿ ಶೇ 60 ರಷ್ಟು ಕೃಷಿ ಕಾರ್ಮಿಕರ ಕೂಲಿಯ ಪಾಲು, ಉಳಿದ ಶೇಕಡ 40 ರಷ್ಟು ಕಾರ್ಯಕ್ರಮಗಳಿಗೆ ಬೇಕಾದ ಸಲಕರಣೆಗಳ ಸಾಮಾನುಗಳ ವೆಚ್ಚದ ಪಾಲು ಆದರೆ. ನಂತರ ಕೂಲಿಯ ವೆಚ್ಚದ ಪಾಲೂ, ಸಾಮಾನು ಸಲಕರಣೆಗಳ ಪಾಲು ಅನುಕ್ರಮವಾಗಿ ಶೇ 50 ರಷ್ಟಿರಬೇಕೆಂದೂ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಹೊಸ ಆದೇಶ ನೀಡಿತು. ಹೆಚ್ಚು ಹೆಚ್ಚು ಗ್ರಾಮೀಣ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಮೂಲೋದ್ದೇಶಕ್ಕಿಂತಲೂ ಇನ್ನುಮುಂದೆ ಹೆಚ್ಚು ಹೆಚ್ಚು ಬಾಳುವಿಕೆಯ ಗ್ರಾಮೀಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳುವುದೇ ಮುಖ್ಯವಾಗತೊಡಗಿತು ಪರಿಣಾಮವಾಗಿ ಗ್ರಾಮೀಣ ಕೆರೆಗಳನ್ನು ಆಳ ಮಾಡುವುದು, ಹೊಲ ಗದ್ದೆಗಳಲ್ಲಿ ನೀರಾವರಿಗಾಗಿ ಹೊಂಡಗಳನ್ನು ತೋಡುವುದು, ಕಬ್ಬಿಣ ಸಿಮೆಂಟ್ ಸಾಮಗ್ರಿಗಳಿಲ್ಲದೆ ಗ್ರಾಮೀಣ ಹೊಳೆ ತೋಡುಗಳಿಗೆ ಒಡ್ಡುಗಳನ್ನು ರಚಿಸುವುದು (ಚೀನಾದಲ್ಲಿ ಈ ಮಾದರಿಯ ನೀರಾವರಿಗೆ ಬಹಳ ಆದ್ಯತೆಯಿದೆ) ಇತ್ಯಾದಿ ಹೆಚ್ಚು ಕೂಲಿ ವೆಚ್ಚದ ಹಾಗೂ ಕಡಿಮೆ ಸಾಮಾನು ಸಲಕರಣೆಗಳ ವೆಚ್ಚದ ಯೋಜನೆಗಳನ್ನು ಅಲಕ್ಷಿಸಲಾಯಿತು. ಇದರಿಂದ ಗ್ರಾಮೀಣ ಉದ್ಯೋಗಾವಕಾಶ ಇಳಿಮುಖವಾಗುವುದರೊಂದಿಗೇ ಕೃಷಿ ಉತ್ಪನ್ನ ಹೆಚ್ಚಳದ ಸಾಧ್ಯತೆಯೂ ಕಡಿಮೆಯಾಯಿತು.

ಒಂದೆಡೆ ಕೃಷಿ ಕಾರ್ಮಿಕರ ಸಂಘಟಿತ ಹೋರಾಟಗಳ ಪರಿಣಾಮವಾಗಿ ಕೆಲವು ರಾಜ್ಯಗಳು ಅನಿವಾರ್ಯವಾಗಿ ಕನಿಷ್ಠ ಕೂಲಿಯನ್ನು ಹೆಚ್ಚಿಸಬೇಕಾಯಿತು. ಇನ್ನೊಂದೆಡೆ ಕೇಂದ್ರ ಸರಕಾರವು ಬೆಲೆ ಏರಿಕೆಗೆ ಅನುಗುಣವಾಗಿ ಹೆಚ್ಚಿಸಿದ ಕನಿಷ್ಠ ಕೃಷಿಕೂಲಿಗನುಗುಣವಾಗಿ ರಾಜ್ಯ ಸರಕಾರಗಳಿಗೆ ಗ್ರಾಮೀಣ ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳಿಗೆ ಹೆಚ್ಚಿಸುವ ಹಣಕಾಸು ಸಹಾಯ ಒದಗಿಸಲೇ ಇಲ್ಲ. ರಾಜ್ಯ ಸರಕಾರಗಳು ಕಾರ್ಯಕ್ರಮಗಳ 1/3 ನಷ್ಟು ವೆಚ್ಚವನ್ನು ತಾನೇ ವಹಿಸಿಕೊಳ್ಳಬೇಕಿತ್ತು. ರಾಜ್ಯ ಸರಕಾರಗಳ ಸಂಪನ್ಮೂಲಗಳು ಸೀಮಿತವಾಗಿರುವುದರಿಂದ ಹೆಚ್ಚಿನವುಗಳು ಈ ಕಾರ್ಯಕ್ರಮಗಳನ್ನು ನಿರೀಕ್ಷಿಸಿದ ಪ್ರಮಾಣದಷ್ಟು ಕೈಗೊಳ್ಳಲಾರವಾದವು.

ಈ ಕಾರ್ಯಕ್ರಮಗಳಿಗೆ ಬೇಕಾದ ಆಹಾರಧಾನ್ಯಗಳ ಸರಬರಾಜನ್ನೂ ಕೇಂದ್ರ ಸರಕಾರವು ಕಡಿಮೆಗೊಳಿಸುತಾ ಬಂತು. ಪರಿಣಾಮವಾಗಿ ಗ್ರಾಮೀಣ ಉದ್ಯೋಗದಲ್ಲಿ ನಿರತರಾದ ಕೃಷಿ ಕಾರ್ಮಿಕರ ಕೂಲಿಯಲ್ಲಿ ಆಹಾರಧಾನ್ಯಗಳ ಪಾಲು ಕಡಿಮೆಯಾಗತೊಡಗಿತು. ಹಣದ ರೂಪದ ಕೂಲಿಯನ್ನು ಬೆಲೆ ಏರಿಕೆ ಮತ್ತು ಹಣದುಬ್ಬರ ನುಂಗಿ ಹಾಕಿದವು. ಗ್ರಾಮೀಣ ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳಲ್ಲಿ ಒಂದು ಮಾನವ ದಿನದ ಕೆಲಸಕ್ಕೆ ಒದಗಿಸಿದ ಆಹಾರಧಾನ್ಯಗಳು ಕಳೆದ ನಾಲ್ಕು ವರ್ಷಗಳಲ್ಲಿ ಇಳಿಮುಖವಾದುದನ್ನು ಗಮನಿಸಬಹುದು.

ವರ್ಷ	ಒಬ್ಬನಿಗೆ ಒಂದು ದಿನದ ಕೆಲಸಕ್ಕೆ ಕೂಲಿ		
1980-81	3·26 ಕೆ.ಜಿ.	,,	,,
1981-82	0·65 ಕೆ.ಜಿ.	,,	,,
1982-83			
1983-84	0·45 ಕೆ.ಜಿ.	,,	,,

ಬಡವರ ಕುರಿತು ಮೊಸಳೆ ಕಣ್ಣೀರು ಸುರಿಸುತ್ತಿರುವ ಇಂದಿರಾಗಾಂಧಿ ಸರಕಾರದ ಈ ಧೋರಣೆಯಿಂದಾಗಿ ಗ್ರಾಮೀಣ ಉದ್ಯೋಗ ನಿರ್ಮಾಣದ ಕಾರ್ಯಕ್ರಮಕ್ಕೆ ಬಲವಾದ ಕೊಡಲಿ ಏಟು ಬಿದ್ದಂತಾಯಿತು. ನಿರಂತರ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಕೃಷಿ ಕೂಲಿಗಾರರಿಗೆ ಆಹಾರಧ್ಯಾನಗಳ ಮೂಲಕ ಕೂಲಿ ಕೊಡುವುದರಿಂದ ಅವರ ಜೀವನ ಮಟ್ಟ ಸುಧಾರಿಸುವುದು.

ಕಷ್ಟಕಾಲದಲ್ಲಿ ಅವರು ಆಹಾರಧಾನ್ಯಗಳಿಗಾಗಿ ಭೂಮಾಲಿಕರ, ವ್ಯಾಪಾರಸ್ಥರ ಹಂಗಿನಲ್ಲಿ ಬೀಳುವ ಅವಕಾಶ ಕಡಿಮೆಯಾಗುವುದು. ಅವರ ಉತ್ಪಾದನಾ ಶಕ್ತಿ ಹೆಚ್ಚುವುದು. ಪ. ಬಂಗಾಳ ಎಡರಂಗ ಸರಕಾರವು ಕೆಲಸಕ್ಕೆ-ಕಾಳು ಕಾರ್ಯಕ್ರಮದಿಂದ ಇಂತಹ ಉದ್ದೇಶಗಳನ್ನು ಸಾಕಷ್ಟು ಸಾಧಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ ಇಂದಿರಾ ಕಾಂಗ್ರೆಸ್‌ಗೆ, ಎಡರಂಗ ಸರಕಾರವು ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯವಾಗುವುದು ಸಹಿಸಲಸಾಧ್ಯವಾಯಿತು.

ಭೂಮಾಲೀಕ – ಬಂಡವಾಳಶಾಹಿ ಪದ್ಧತಿಯ ಇಂದಿರಾ ಕಾಂಗ್ರೆಸ್ ಸರಕಾರಕ್ಕೆ ದೇಶದ ಕೋಟ್ಯಂತರ ಗ್ರಾಮೀಣ ಬಡವರು ಆರ್ಥಿಕ ಸ್ವಾವಲಂಬನೆ ಹೊಂದುವುದು ಬೇಡವಾಗಿದೆ ಕಾರಣ ಅಗ್ಗದ ಕೃಷಿ ಕೂಲಿಗಾರರೇ ಅವರಿಗೆ ಬೇಕಾಗಿದೆ. ತಮ್ಮ ಲಾಭಗಳಿಕೆ ಹೆಚ್ಚಿಸಲು ಗ್ರಾಮೀಣ ಉದ್ಯೋಗ ನಿರ್ಮಾಣ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಅಲ್ಪಸ್ವಲ್ಪವಾಗಿ ರಿಯಾಯಿತಿ ದರಗಳಲ್ಲಿ ಒದಗಿಸುವ ಆಹಾರ ಧಾನ್ಯಗಳು ಕಾರ್ಯಕ್ರಮಗಳ ಪೂರ್ಣ ಆಗತ್ಯತೆಯನ್ನು ಪೂರೈಸುವುದಿಲ್ಲ. ಅಲ್ಲದೆ ಹೆಚ್ಚಿನ ರಾಜ್ಯ ಸರಕಾರಗಳು ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಚೆನ್ನಾಗಿ ಹೊಂದಿರುವುದಿಲ್ಲ. ಆದುದರಿಂದ ರಿಯಾಯಿತಿ ದರಗಳ ಆಹಾರಧಾನ್ಯಗಳು ಬಡ ಕೃಷಿ ಕಾರ್ಮಿಕರಿಗೆ ತಲುಪದೆ, ಅವರು ಭೂಮಾಲಿಕರನ್ನೂ ಶ್ರೀಮಂತ ರೈತರನ್ನೂ, ರಕ್ತ ಹೀರುವ ವ್ಯಾಪಾರಿಗಳನ್ನೂ ಧನಪಿಶಾಚಿಗಳನ್ನೂ ಇನ್ನಷ್ಟು ಹೊಂದಿರಬೇಕಾಗುವುದು.

ಈಗ ಚುನಾವಣೆ ಹತ್ತಿರ ಬರುತ್ತಿದಂತೆ, ಕೇಂದ್ರ ಸರ್ಕಾರದ ಸಂಪೂರ್ಣ ನೆರವಿನಿಂದ ಗ್ರಾಮೀಣ ಭೂರಹಿತರಿಗೆ ಖಾತರಿ ಉದ್ಯೋಗ ಹೊಸ ಕಾರ್ಯಕ್ರಮವನ್ನು ಘೋಷಿಸಲಾಗಿದೆ. (RLEGP) ಈ ಯೋಜನೆಯಂತೆ ಗ್ರಾಮೀಣ ಪ್ರದೇಶದ ಪ್ರತಿ ಒಂದು ಭೂರಹಿತ ಕುಟುಂಬದ ಒಬ್ಬ ಸದಸ್ಯನಿಗಾದರೂ ವರ್ಷಕ್ಕೆ 100 ದಿನಗಳ ಉದ್ಯೋಗಾವಕಾಶ ನೀಡುವುದಾಗಿದೆ. 1983-84 ಮತ್ತು 1984-85ರಲ್ಲಿ ಅನುಕ್ರಮವಾಗಿ ಆ ಕಾರ್ಯಕ್ರಮದ್ದಂತೆ 60 ಮಿಲಿಯ ಮಾನವ ದಿನಗಳ ಹಾಗೂ 300 ಮಿಲಿಯ ಮಾನವ ದಿನಗಳ ಉದ್ಯೋಗಾವಕಾಶಗಳನ್ನು ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಇದರ ಫಲಿತಾಂಶ ಇನ್ನೂ ತಿಳಿದು ಬರಲಿಲ್ಲ. ಆದರೆ ಈ ಕಾರ್ಯಕ್ರಮದ ಗುರಿ ಸಾಧಿಸಲಿಕ್ಕೂ ವರ್ಷಕ್ಕೆ ಕನಿಷ್ಠ 1500 ಮಿಲಿಯ ಮಾನವ ದಿನಗಳ ಉದ್ಯೋಗಾವಕಾಶಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಬೇಕಾಗುವುದು. 1978-79ರಲ್ಲಿಯೇ ಗ್ರಾಮೀಣ ಕೃಷಿ ಕಾರ್ಮಿಕರ ಸಂಖ್ಯೆ 193 ಮಿಲಿಯವಾಗಿತ್ತು. ಇವರಲ್ಲಿ ಪ್ರತಿಯೊಬ್ಬರಿಗೆ ವರ್ಷಕ್ಕೆ ಕನಿಷ್ಠ 100ದಿನಗಳ ಕೆಲಸ ದೊರಕಿಸಬೇಕಾದರೆ, 19300 ಮಿಲಿಯ ಮಾನವ ದಿನಗಳ ಉದ್ಯೋಗ ನಿರ್ಮಾಣವಾಗಬೇಕು ! ಇಷ್ಟು ಬೃಹತ್ ಪ್ರಮಾಣದಲ್ಲಿ ಇಂದಿರಾಗಾಂಧಿ ಸರಕಾರ ಉದ್ಯೋಗ ನಿರ್ಮಾಣ ಮಾಡಬಲ್ಲುದೆ ? ಅದರ ಕಾರ್ಯಕ್ರಮಗಳೆಲ್ಲವೂ ಕಣ್ಣಿಗೆ ಮಣ್ಣೆರಚಿ, ಓಟು ಗಿಟ್ಟಿಸುವ ತಂತ್ರಗಳಾಗಿವೆ ಅಷ್ಟೆ.

ಇತ್ತೀಚಿನ ಬೆಳವಣಿಗೆಗಳ ಕುರಿತು ಪೊಲಿಟ್ ಬ್ಯೂರೋ

ಜೂನ್ 1 ಮತ್ತು 2 ರಂದು ನಡೆದ ಸಿ.ಪಿ.ಐ.(ಎಂ) ನ ಪೊಲಿಟ್‌ಬ್ಯೂರೋ ಸಭೆ ದೇಶದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಗಳ ಕುರಿತು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಇತ್ತೀಚೆಗೆ ಮಹಾರಾಷ್ಟ್ರದ ಭೀವಂಡಿ, ಥಾಣೆ ಮತ್ತು ಬೊಂಬಾಯಿ ನಗರದಲ್ಲಿ ಶಿವಸೇನೆಯಿಂದ ನಿಯೋಜಿತಗೊಂಡ ಕೊಲೆ ದೊಂಬಿ, ಬೆಂಕಿ ಹಚ್ಚಿದ ಪ್ರಕರಣಗಳು ಅನಿರೀಕ್ಷಿತವಾದುದಲ್ಲ ಸರ್ಕಾರಕ್ಕೆ ಇದರ ಬಗ್ಗೆ ಮೊದಲೇ ತಿಳಿವಳಿಕೆಯಿತ್ತು ಆದರೂ ಸರ್ಕಾರ ಈ ಬಗ್ಗೆ ನಿರ್ಲಕ್ಷ್ಯ ತೋರಿ ಯಾವುದೇ ಮುನ್ನೆಚ್ಚರಿಕೆಯನ್ನು ಕೈಗೊಳ್ಳದ ಕಾರಣ ಅಪಾರ ಜೀವಹಾನಿ ಆಸ್ತಿ ನಷ್ಟಗಳು ಸಂಭವಿಸಿತೆಂದು ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ. ಆಕ್ರಮಣಕ್ಕೆ ತುತ್ತಾದವರಿಗೆ ರಕ್ಷಣೆ ನೀಡುವ ಪ್ರಾಥಮಿಕ ಕರ್ತವ್ಯವನ್ನು ಸಹ ಪೋಲೀಸರು ನೆರವೇರಿಸದೆ ಹಿಂಸೆಯನ್ನು ಉತ್ತೇಜಿಸಿದ್ದಾರೆ. ರಾಷ್ಟ್ರೀಯ ಐಕ್ಯತೆ ಮತ್ತು ಕೋಮು ಶಾಂತಿಯನ್ನು ಬಯಸುವವರೆಲ್ಲರೂ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅನುಯಾಯಿಗಳನೊಳಗೊಂಡು ಕಾಂಗ್ರೆಸ ರಾಷ್ಟ್ರ ವಿರೋಧಿ ನೀತಿಯನ್ನು ಎದುರಿಸಿ ಹೋರಾಡಬೇಕೆಂದು ಪಿ. ಬಿ. ಮನವಿ ಮಾಡಿದೆ.

ಅಸ್ಸಾಂನ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ ಹಿಂಸೆ ಮತ್ತೆ ಯಾವುದೇ ಕ್ಷಣದಲ್ಲಾದರೂ ಭುಗಿಲೇಳಬಹುದೆಂದು ಪಿ. ಬಿ. ಅಭಿಪ್ರಾಯ ಪಟ್ಟಿದೆ. ಇಲ್ಲೂ ಸಹ ಆಳುವ ಪಕ್ಷ ಅಸ್ಸಾಮಿ ಮತ್ತು ಅಸ್ಸಾಮಿ ಅಲ್ಲದವರ ನಡುವಿನ ಘರ್ಷಣೆಯನ್ನು ತನಗಾಗಿ ಉಪಯೋಗಿಸಿಕೊಳ್ಳುವಂತಹ ಧೋರಣೆಗಳನ್ನು ಅನುಸರಿಸುತ್ತಿದೆಯೆಂದೂ, 1979 ರ ಮತದಾರರ ಪಟ್ಟಿಯನ್ನು ಅಳಿಸಿ ಹಾಕಬೇಕೆಂದು ಕೆಲವು ಪಕ್ಷಗಳು ಮಾಡಿರುವ ಸಲಹೆ ಲಕ್ಷಾಂತರ ಜನರ ಮತದಾನದ ಹಕ್ಕನ್ನು ನಿರಾಕರಿಸುತ್ತದೆಯೆಂಬುದಾಗಿ ಅಭಿಪ್ರಾಯ ಪಟ್ಟಿದೆ.

ಅಸ್ಸಾಮಿ ಬಹು ಸಂಖ್ಯಾತರ ಮತ್ತು ಭಾಷಾ ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಎಲ್ಲಾ ಪ್ರಜಾಸತ್ತಾತ್ಮಕ ಪಕ್ಷಗಳೂ ಮತ್ತು ಸಂಸ್ಥೆಗಳು ಮಾರ್ಗವನ್ನು ಹುಡುಕುತ್ತವೆಂಬ ಮತ್ತು ಅದೊಂದೇ ಐಕ್ಯತೆ

(6ನೇ ಪುಟ ನೋಡಿ)

ರಾಜ್ಯ ಸರ್ಕಾರದ ಶಿಕ್ಷಣ ಮಸೂದೆ ಕುರಿತು

— ಕಾ|| ಪಿ. ರಾಮಚಂದ್ರರಾವ್

ಕರ್ನಾಟಕ ರಾಜ್ಯ ಸರ್ಕಾರವು ವಿಧಾನ ಸಭೆಯಲ್ಲಿ ಮಂಡಿಸಿದ "ಶಿಕ್ಷಣ ಮಸೂದೆ" ಯ ಮೇಲೆ ನಡೆದ ಚರ್ಚೆಯಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಶಾಸಕರಾದ ಕಾ. ಪಿ ರಾಮಚಂದ್ರ ರಾವ್ ಅವರು ಮಾಡಿದ ದೀರ್ಘ ಭಾಷಣವನ್ನು ಸಂಕ್ಷಿಪ್ತಗೊಳಿಸಿ ಪ್ರಕಟಿಸುತ್ತಿದ್ದೇವೆ.

ಸಮಗ್ರ ಶಿಕ್ಷಣ ಮಸೂದೆಯನ್ನು ತರುವ ತಮ್ಮ ಭರವಸೆಯನ್ನು ಈಡೇರಿಸುತ್ತಾ ಜನತಾ ಸರಕಾರದ ಶಿಕ್ಷಣ ಸಚಿವ ರಾಚಯ್ಯನವರು ಕರ್ನಾಟಕ ರಾಜ್ಯ ಶಿಕ್ಷಣ ಮಸೂದೆಯನ್ನು ವಿಧಾನ ಸಭೆಯ ಮುಂದಿಟ್ಟಿದ್ದಾರೆ. ಅದು ಕ್ರಾಂತಿಕಾರಿ ಮಸೂದೆಯೇನೂ ಅಲ್ಲ, ಅದು ಸಮಗ್ರ ಮಸೂದೆಯೂ ಅಲ್ಲ, ಆದರೆ ವಿದ್ಯಾ ಕ್ಷೇತ್ರದಲ್ಲಿ ಈ ಮಸೂದೆಯು ಒಂದು ಮುಂದಿನ ಹೆಜ್ಜೆಯನ್ನಿಡುವ ಪ್ರಯತ್ನ ಎಂದು ಮಾತ್ರ ಖಂಡಿತವಾಗಿ ಹೇಳಬಹುದು.

ಈ ಮಸೂದೆಯ ಮೂಲಕ ಸರಕಾರವು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸ್ವಲ್ಪ ನಿಯಂತ್ರಣವನ್ನು ತರುವುದಕ್ಕೆ ಕೆಲವೊಂದು ಸುಧಾರಣೆಗಳನ್ನು ತರುವುದಕ್ಕೂ ಪ್ರಯತ್ನ ಮಾಡುತ್ತಿದೆ ಎಂಬುದಕ್ಕೆ ಸಂಶಯವಿಲ್ಲ.

ಉದ್ದೇಶಗಳ ಭಾಗವನ್ನು ಪರಿಶೀಲಿಸಿದರೆ ಈ ಮಸೂದೆಯ ಇತಿ ಮಿತಿಗಳನ್ನು ನಾವು ತಿಳಿಯಬಹುದು. "ವಿದ್ಯಾಭ್ಯಾಸ ಸಂಸ್ಥೆಗಳ ಯೋಜನಾಬದ್ಧ ಬೆಳವಣಿಗೆಯನ್ನು ಆಶಿಸಲಾಗಿದೆ. ವಿದ್ಯಾಭ್ಯಾಸಕ್ಷೇತ್ರದಲ್ಲಿ "ಮಟ್ಟಗಳನ್ನು ಉತ್ತಮಗೊಳಿಸಲು' ಉದ್ದೇಶಿಸಲಾಗಿದೆ. "ವೈಜ್ಞಾನಿಕ ಮತ್ತು ಜಾತ್ಯಾತೀತ ದೃಷ್ಟಿಕೋಣವನ್ನು ಬೆಳೆಸಲು ಉದ್ದೇಶಿಸಲಾಗಿದೆ. ಮೊದಲಿನ ಎರಡು ಉದ್ದೇಶಗಳಿಗೆ ಸಂಬಂಧಪಟ್ಟು ಮಸೂದೆಯ ಕೆಲವು ಭಾಗಗಳಲ್ಲಿ ಉಲ್ಲೇಖವಿದ್ದರೂ, ನಿರ್ದಿಷ್ಟ ಕಲಮುಗಳನ್ನು ಸೇರಿಸಿಕೊಳ್ಳಲಾಗಿದ್ದರೂ, ವೈಜ್ಞಾನಿಕ ಮತ್ತು ಜಾತ್ಯಾತೀತ ದೃಷ್ಟಿಕೋಣವನ್ನು ಬೆಳೆಸುವ ಸಲುವಾಗಿ ಯಾವುದೇ ಉಲ್ಲೇಖನವಾಗಲೀ, ಯಾವುದೇ ನಿರ್ದಿಷ್ಟ ಕಲಮುಗಳಾಗಲೀ ಈ ಮಸೂದೆಯಲ್ಲಿ ಇದ್ದ ಹಾಗೆ ಕಾಣುವುದಿಲ್ಲ.

ಹಿಂದಿನ ಕಾಲದಲ್ಲಿ ಮೇಲ್ವರ್ಗಗಳವರಿಗೆ ವಿದ್ಯಾಭ್ಯಾಸ ಸಿಗುತ್ತಿತ್ತು. ಈಗಿನ ಕಾಲದಲ್ಲಿ ಸಮಾಜದ ಬೆಳವಣಿಗೆ ಆಗಬೇಕಾದರೆ ಸಾಮೂಹಿಕ ವಿದ್ಯಾಭ್ಯಾಸ ಅತ್ಯಾವಶ್ಯಕವಾಗಿದೆ. ಅದಕ್ಕೆ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಬೇಕಾಗಿ ಬರುತ್ತದೆ. ಈ ರೀತಿಯಲ್ಲಿ ಸಾಮೂಹಿಕ ವಿದ್ಯಾಭ್ಯಾಸ ಕೊಡುವುದಕ್ಕೆ ಬೇಕಾದ ಕಲಮುಗಳು ಈ ಮಸೂದೆಯಲ್ಲಿ ಕಾಣ ಸಿಗುವುದಿಲ್ಲ. ತಿಳುವಳಿಕೆಯಲ್ಲಿ 70 ಕೋಟಿ ಜನತೆಗೆ ವಿದ್ಯಾಭ್ಯಾಸ ಕೊಡ ಬೇಕೆಂದಿದ್ದರೂ ಕಾರ್ಯತಃ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಈ ತಿಳುವಳಿಕೆ ಜ್ಯಾರಿಗೆ ಬಂದದ್ದು ಕಾಣುವುದಿಲ್ಲ. ಇನ್ನೂ ನಮ್ಮ ಶಾಲಾ ಕಾಲೇಜುಗಳಲ್ಲಿ ಹಳೆಯ ಮನೋವೈಜ್ಞಾನಿಕ ದೃಷ್ಟಿಕೋನವೇ ಕಾಣುತ್ತಿದೆಯೇ ವಿನಃ, ಆಧುನಿಕ "ಸಾಮಾಜಿಕ-ವೈಜ್ಞಾನಿಕ ದೃಷ್ಟಿಕೋನ"ವು ಕಾಣುವುದಿಲ್ಲ. ನೂರಕ್ಕೆ ನೂರು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಪಡೆಯುವ ಒಂದಲ್ಲ ಒಂದು ಉದ್ಯೋಗಕ್ಕೆ ಅರ್ಹತೆಯನ್ನು ಪಡೆಯುವ ವ್ಯವಸ್ಥೆ ಇನ್ನೂ ಕನಸಿನ ಮಂಡಿಗೆಯಾಗಿದೆಯಷ್ಟೆ.

ವಿದ್ಯಾಭ್ಯಾಸಕ್ಕೂ ನಮ್ಮ ಜೀವನಕ್ಕೂ ಏನೇನೂ ಸಂಬಂಧವಿಲ್ಲದಂತಾಗಿದೆ. ಯಾವುದೇ ರೀತಿಯಲ್ಲಿ ವಿದ್ಯಾಭ್ಯಾಸ ಕ್ಷೇತ್ರವು ಜನ ಜೀವನಕ್ಕೆ ಹೊಂದಿಕೊಳ್ಳುವಂತೆ ಮಾಡುವ ಪ್ರಯತ್ನವನ್ನು ಈವರೆಗೆ "ಖಾಸಗೀ ವಿದ್ಯಾ ಏಜೆನ್ಸಿ"ಗಳು ಅಡ್ಡಿ ಮಾಡುತ್ತಾ ಬಂದಿದೆ. ಈಗಲೂ ಈ ಖಾಸಗೀ ಏಜೆನ್ಸಿಗಳು ಇದೇ ಕ್ರಮ ವಹಿಸುತ್ತಿವೆ. ಕೆಲವು ಖಾಸಗಿ ಏಜೆನ್ಸಿಗಳು "ಶೋ-ಪೀಸ್" ತರಹದ ಶಾಲೆಗಳನ್ನು ತೋರಿಸಿ, ಎಲ್ಲಾ ಖಾಸಗಿ ಒಡೆತನದ ಶಾಲೆಗಳು ಹೀಗೆಯೇ ಇವೆ ಎಂಬ ಭಾವನೆಯನ್ನು ಸಾರ್ವಜನಿಕರಲ್ಲಿ ಹುಟ್ಟಿಸುತ್ತವೆ. ಆ ಮೂಲಕ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಮಗ್ರ ಸುಧಾರಣೆ ಮತ್ತು ನಿಯಂತ್ರಣವನ್ನು ತಡೆ ಮಾಡುತ್ತದೆ. ಇಂಗ್ಲೀಷ್ ವ್ಯಾಮೋಹವು ಸಾರ್ವತ್ರಿಕವಾಗಿ ಅದೂ ಮುಖ್ಯ ಸ್ತರಗಳಲ್ಲಿ ಇರುವವರೆಗೆ ಈ ಖಾಸಗೀ ವಿದ್ಯಾಭ್ಯಾಸ ಏಜೆನ್ಸಿಗಳ ಪ್ರಯತ್ನಕ್ಕೆ "ಇಂಬು" ಕೂಡ ಸಿಗುತ್ತದೆ.

ಸರ್ಕಾರವು ನಡೆಸುತ್ತಿರುವ ಶಾಲೆಗಳು ಖಾಸಗಿಯವರ ಈ ವಾದಕ್ಕೆ ಇನ್ನೂ ಪುಷ್ಟಿಯನ್ನು ಕೊಡುತ್ತದೆ. ಸರ್ಕಾರವು ನಡೆಸುವ ಅತ್ಯಧಿಕ ಶಾಲೆಗಳು ಸರಿಯಾಗಿ ಕ್ರಮಬದ್ಧವಾಗಿ "ಮಟ್ಟಗಳನ್ನು ಕಾಪಾಡುವ" ರೀತಿಯಲ್ಲಿ ನಡೆಯದಿರುವುದೇ ಈ ಭಾವನೆಗೆ ಕಾರಣ

ಈ ಮಸೂದೆಯು ಖಾಸಗೀ ಶಾಲೆಗಳ ಮೇನೇಜುಮೆಂಟುಗಳ ಅಧಿಕಾರವನ್ನು—ಅಧ್ಯಾಪಕರನ್ನು ನೇಮಿಸಿಕೊಳ್ಳುವ ಮತ್ತು ತೆಗೆದುಹಾಕುವ ಅಧಿಕಾರವನ್ನು ಪ್ರಶ್ನಿಸುತ್ತದೆ ಮತ್ತು ನಿಯಂತ್ರಿಸುತ್ತದೆ ಎಂಬುದೇ ಈ ಮೇನೇಜುಮೆಂಟುಗಳ ಅಪಾದನೆ. ನನ್ನ ಪ್ರಶ್ನೆ : ಇದು ತಪ್ಪೆ ? ಎಲ್ಲಾ ಶಾಲೆಗಳ ಅಧ್ಯಾಪಕರ ವೇತನ ಇತ್ಯಾದಿ ಕೆಲಸದ ಶರ್ತಗಳು, ಶಾಲೆಗಳ ಪಾಠ ಪಟ್ಟಿ ಇವುಗಳನ್ನು ನಿಯಂತ್ರಿಸುವ ಅಧಿಕಾರ ಸರಕಾರಕ್ಕೆ ಬೇಡವೇ ? ಈ ಅಧಿಕಾರವನ್ನು ಈ ಮಸೂದೆಯು ಸರ್ಕಾರಕ್ಕೆ ಕೊಟ್ಟರೆ ಅದರಲ್ಲಿ ತಪ್ಪೇನು ?

ಖಾಸಗೀ ಮೇನೇಜುಮೆಂಟುಗಳ ಈ ವಿರೋಧವನ್ನು ಲೆಕ್ಕಿಸಲೇ ಬಾರದು !

ಇನ್ನು ಇದೇ ವಾದವನ್ನು ಈ ಖಾಸಗಿ ಮೇನೇಜುಮೆಂಟುಗಳು ಇನ್ನೊಂದು ರೀತಿಯಲ್ಲಿ ಮಂಡಿಸುತ್ತವೆ. "ಸಂವಿಧಾನವು ಅಲ್ಪಸಂಖ್ಯಾತರಿಗೆ-ಅಲ್ಪ ಮತೀಯ ಮತ್ತು ಅಲ್ಪ ಭಾಷೀಯರಿಗೆ ಕೊಟ್ಟ ಆಶ್ವಾಸನೆಗಳಿಗೆ ಈ ಮಸೂದೆ ಚ್ಯುತಿಯನ್ನು ತರುತ್ತಿದೆ ಎಂಬುದೇ ಈ ವಾದ.

ಸಂವಿಧಾನವು ಅಲ್ಪ ಭಾಷೀಯರಿಗೂ ಅಲ್ಪ ಮತೀಯರಿಗೂ ತಮ್ಮ ತಮ್ಮ ಭಾಷೆ ಅಥವ ಮತಗಳಿಗೆ ಸಂಬಂಧಪಟ್ಟ, ಆಯಾಯ ಪಂಗಡದವರಿಗೆ ಆಯಾ ಭಾಷೆ, ಮತೀಯ ಅಂಶಗಳನ್ನು ಕಲಿಸಿಕೊಡುವುದಕ್ಕೆ ಏರ್ಪಾಡು ಮಾಡುವುದಕ್ಕೆ ಯಾವ ತರದ ಅಡ್ಡಿ ಆತಂಕವಿರಬಾರದು ಎಂದು ಸ್ಪಷ್ಟಪಡಿಸಿದೆ. ಅಂತಹ ಸಂಸ್ಥೆಗಳನ್ನು ನಡೆಸಲು ಅವರಿಗೆ ಎಲ್ಲಾ ತರಹ "ಸಹಾಯ"ವನ್ನು ಸರಕಾರಗಳು ಕೊಡಬೇಕು. ಇದರಲ್ಲಿ ಯಾವ ತಾರತಮ್ಯವನ್ನು ತೋರಿಸಬಾರದು ಎಂದು ನಿರ್ದೇಶಿಸಿದೆ. ವಿನಹ ಸರಕಾರಗಳು ಈ ಸಂಸ್ಥೆಗಳಲ್ಲಿ ಸಾರ್ವತ್ರಿಕ ವಿದ್ಯಾಭ್ಯಾಸ ಕೊಡುವಾಗ ಸಾರ್ವತ್ರಿಕ ವಿದ್ಯಾಭ್ಯಾಸವು ಹೇಗಿರಬೇಕು ? ಎಂಬುದರ ಕುರಿತು ನಿರ್ದೇಶನ ನಿಯಂತ್ರಣ ನೀಡಬಾರದು ಎಂದೇನೂ ಇಲ್ಲ.

ಈಗ ಈ ಖಾಸಗಿ ವಿದ್ಯಾಭ್ಯಾಸ ಸಂಸ್ಥೆಗಳು ಅಲ್ಪ ಭಾಷೆ ಮತ್ತು ಅಲ್ಪ ಮತದ ಹೆಸರಿನಲ್ಲಿ ತಾವು ನಡೆಸುವ ಶಾಲಾ ಕಾಲೇಜುಗಳಲ್ಲಿ ಸರಕಾರದ ಯಾವುದೇ ತರದ ನಿಯಂತ್ರಣವಿರಬಾರದು ಎಂದು ವಾದ ಮಾಡುತ್ತಿರುವುದಕ್ಕೂ, ಸಂವಿಧಾನದ 29, 30 ಮತ್ತು 31 ನೇ ಕಲಮುಗಳ ಮೂಲಕ ದೇಶದ ಅಲ್ಪ ಸಂಖ್ಯಾತರಿಗೆ ಕೊಟ್ಟ ಆಶ್ವಾಸನೆಗಳಿಗೂ ಏನೂ ಸಂಬಂಧವೇ ಇಲ್ಲ.

ಕೇರಳದಲ್ಲಿ ಕಾ. ಇ. ಎಂ. ಎಸ್ ನಂಬ್ಯೂದಿರಿಪಾದರ ಕಮ್ಯುನಿಸ್ಟ್ ಸರಕಾರದ ವಿದ್ಯಾಮಂತ್ರಿ ಜೋಸೆಫ್ ಮುಂಡಶೆರಿಯವರು ಸಮಗ್ರ ವಿದ್ಯಾಭ್ಯಾಸ ಮಸೂದೆ ತಂದಾಗ್ಲೂ ಇದೇ ಶಕ್ತಿಗಳು "ವಿಮೋಚನಾ ಸಮರ" ಹೂಡಲಿಲ್ಲವೇ ?

ಎಲ್ಲಾ ರಾಜ್ಯಗಳಲ್ಲೂ ಪ್ರಗತಿಪರ ವಿದ್ಯಾಭ್ಯಾಸ ಮಸೂದೆಗಳನ್ನು ತರುವಾಗ ಈ ಶಕ್ತಿಗಳು ನಿರಂತರವಾಗಿ ಅಡ್ಡಿಪಡಿಸುತ್ತಾ ಬಂದಿವೆ. ನಾವು ಮಾತ್ರ, ಇದನ್ನೆಲ್ಲಾ ಲೆಕ್ಕಿಸದೆ ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಧೈರ್ಯಮಾಡಿ ಸುಧಾ

(6ನೇ ಪುಟ ನೋಡಿ)

ಕಾವ್ಯ

ಪಾಬ್ಲೊ ನೆರೂದ

ಆ ವಯಸ್ಸಿನಲ್ಲಿ.... ಕಾವ್ಯ ಬಂತು
ನನ್ನನ್ನು ಹುಡುಕಿಕೊಂಡು. ನನಗೆ ಗೊತ್ತಿಲ್ಲ, ಅದು
ಎಲ್ಲಿಂದ ಬಂತೋ–ಚಳಿಗಾಲದಿಂದ
ಯಾವುದೋ ನದಿಯಿಂದ, ಗೊತ್ತಿಲ್ಲ ನನಗೆ.
ಹೇಗೆ, ಯಾವಾಗ,
ಎಂದು ನನಗೆ ಗೊತ್ತಿಲ್ಲ;
ಇಲ್ಲ, ಅವು ಧ್ವನಿಗಳಲ್ಲ, ಅವು
ಪದಗಳಲ, ಮೌನವೂ ಅಲ್ಲ,
ಆದರೆ
ನನ್ನನ್ನು ಕರೆದದ್ದು ಬೀದಿಯ ಮಧ್ಯದಿಂದ
ಕತ್ತಲಿನ ಕೊಂಬೆಗಳಿಂದ
ಇದ್ದಕ್ಕಿದ್ದ ಹಾಗೆ ಇತರರ ಎಡೆಯಿಂದ
ಬಲಾತ್ಕಾರದ ಬೆಂಕಿಗಳ ನಡುವೆ
ಅಥವ ಒಬ್ಬನೇ ಹಿಂತಿರುಗುವಾಗ
ಅಲ್ಲಿ ನಾನಿದ್ದೆ ಮುಖವಿಲ್ಲದೆ
ಅದು ಮುಟ್ಟಿತು ನನ್ನನ್ನು

ಏನು ಹೇಳಬೇಕೋ ತೋಚಲಿಲ್ಲ ನನಗೆ
ನನ್ನ ನಾಲಿಗೆಯಲ್ಲಿ ಹೆಸರುಗಳೇ ತಿರುಗಲಿಲ್ಲ
ನನ್ನ ಕಣ್ಣುಗಳು ಕುರುಡಾಗಿದ್ದವು
ನನ್ನ ಆತ್ಮದಲ್ಲಿ ಏನೋ ಆರಂಭವಾಯಿತು
ಜ್ವರವೋ ಮರೆತ ರೆಕ್ಕೆಗಳೋ;
ನನ್ನ ದಾರಿಯನ್ನು ನಾನೇ ಹುಡುಕಿದೆ
ಆ ಬೆಂಕಿಯನ್ನು ಅರ್ಥ ಮಾಡಿಕೊಂಡೆ,
ಮೊದಲ ಕ್ಷೀಣ ಸಾಲನ್ನು ಬರೆದೆ –
ಏನೂ ತಿಳಿಯದವನ
ಶುದ್ಧ ಹುಚ್ಚು ಮಾತು
ಶುದ್ಧ ಜ್ಞಾನ
ಇದ್ದಕ್ಕಿದ್ದ ಹಾಗೆ
ಆಕಾಶ ಬಿಚ್ಚಿ ತೆರೆದದ್ದನ್ನು ನೋಡಿದೆ ನಾನು
ಗ್ರಹಗಳು, ಕಂಪಿಸುವ ತೋಟಗಳು,
ಬಾಣಗಳಿಂದ ತೂತಾದ ನೆರಳು
ಬೆಂಕಿ ಮತ್ತು ಹೂವು
ಸುತ್ತ ಬಳಸುವ ರಾತ್ರಿ
ವಿಶ್ವ.

ನಾನು ಅತ್ಯಂತ ಅಲ್ಪ ಜೀವಿ,
ನಕ್ಷತ್ರ ತುಂಬಿದ ಮಹಾ ಶೂನ್ಯದಿಂದ
ಕುಡುಕನಂತಾಗಿ,
ಅಗಾಧತೆಯ ನಿರ್ಮಲ ಭಾಗವಾದೆ;
ನಕ್ಷತ್ರಗಳೊಂದಿಗೆ ದಿಕ್ಕು ಬದಲಿಸಿದೆ,
ನನ್ನ ಹೃದಯ ಬಿರಿದು ಬಿತ್ತು ಗಾಳಿಯಮೇಲೆ.

ಅನುವಾದ : ತೇಜಸ್ವಿನಿ ನಿರಂಜನ

["ಮರಳಿ ಬರುವೆ" ಕವಿತಾ ಸಂಗ್ರಹದಿಂದ]

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 3

ವರ್ಗದೃಷ್ಟಿಗಳನ್ನು ಅರಿಯಲಾರದ ಹುಸಿ 'ಇತಿಹಾಸ'

— ಕಾ. ಎಂ. ಬಸವಪುನ್ನಯ್ಯ

ಐಕ್ಯರಂಗದ ಜೂನ್ 10 ಮತ್ತು 17 ರ ಸಂಚಿಕೆಗಳಲ್ಲಿ ಸಿಪಿಐ (ಎಂ) ನ ಪೊಲಿಟ್‌ಬ್ಯೂರೋ ಸದಸ್ಯರಾದ ಕಾ| ಎಂ. ಬಸವಪುನ್ನಯ್ಯ ಅವರು ಪತ್ರಕರ್ತ ಅರುಣ್ ಶೌರಿಗೆ ನೀಡಿದ್ದ ಉತ್ತರದ ಮೊದಲನೆಯ ಭಾಗದ ಕನ್ನಡ ಅನುವಾದವನ್ನು ಪ್ರಕಟಿಸಿದೆವು. ಈ ಸಂಚಿಕೆಯಲ್ಲಿ ಲೇಖನ ಸರಣಿಯ ಎರಡನೆಯ ಭಾಗದ ಕನ್ನಡ ಅನುವಾದದ ಪ್ರಥಮ ಕಂತನ್ನು ಪ್ರಕಟಿಸುತ್ತಿದ್ದೇವೆ.

ಭಿನ್ನದೃಷ್ಟಿಕೋನಗಳು

ತನ್ನ ನಾಲ್ಕು ಲೇಖನಗಳಲ್ಲಿ ಶೌರಿ ಎಲ್ಲೂ ಕಣ್ತಪ್ಪಿಯೂ, ಸ್ಥೂಲವಾಗಿಯಾದರೂ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸಂನ ವಿದ್ಯಮಾನಗಳ ಪ್ರಸ್ತಾಪವನ್ನೇ ಮಾಡಿಲ್ಲ. ಬೂರ್ಜ್ವಾವರ್ಗದ ಲೋಕದೃಷ್ಟಿಯನ್ನು ಆತ ಎಷ್ಟು ಆಳವಾಗಿ ತನ್ನಲ್ಲಿ ಅಂತರ್ಗತ ಮಾಡಿಕೊಂಡಿದ್ದಾನೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಪ್ರಸ್ತುತ ಜಗತ್ತಿನಲ್ಲಿ ಸಮಾಜವಾದದ ಶಿಬಿರ ಇರುವುದನ್ನು ಆತ ಕಾಣಲಾರ. ಆದರೂ ಆಧುನಿಕ ಭಾರತೀಯ ಇತಿಹಾಸದ ಒಬ್ಬ ಸಂಶೋಧಕ ಪಂಡಿತನ ವೇಷ ತೊಡಬಯಸುತ್ತಾನೆ ಆತ. ಇತರ ಹಲವು ಪ್ರಖ್ಯಾತ ಬೂರ್ಜ್ವಾ ಪಂಡಿತರು ಬೂರ್ಜ್ವಾವರ್ಗ ಮತ್ತು ಕಾರ್ಮಿಕ ವರ್ಗ ಇವೆರಡು ಮೂಲಭೂತ ವರ್ಗಗಳು ಬ್ರಿಟಿಶ್ ಸಾಮ್ರಾಜ್ಯಶಾಹಿಯಿಂದ ಭಾರತೀಯರ ವಿಮೋಚನಾ ಹೋರಾಟದಲ್ಲಿ ವಹಿಸಿದ ಪಾತ್ರವನ್ನು ಕಂಡುಕೊಂಡಿದ್ದಾರೆ. ಆದರೆ ಬೂರ್ಜ್ವಾ ವರ್ಗದ ಕೈಂಕರ್ಯಕ್ಕಾಗಿ ತನ್ನ ಲೇಖನಿ ಒಪ್ಪಿಸಿಕೊಂಡಿರುವ ಈ ಮನುಷ್ಯ ಅವರಂತಲ್ಲ. ಈತ ಅವನ್ನು ಕಾಣಲು ಅಸಮರ್ಥ.

1848 ರಷ್ಟು ಹಿಂದೆಯೇ ಮಾರ್ಕ್ಸ್ ಮತ್ತು ಎಂಗೆಲ್ಸ್, "ನಮ್ಮ ಯುಗ, ಬೂರ್ಜ್ವಾವರ್ಗದ ನಮ್ಮೀ ಯುಗ, ಒಂದು ವಿಶಿಷ್ಟ ಲಕ್ಷಣ ಹೊಂದಿದೆ; ಇದು ವರ್ಗ ವೈಷಮ್ಯಗಳನ್ನು ಸರಳಗೊಳಿಸಿದೆ; ಸಮಸ್ತ ಸಮಾಜವನ್ನು ಪರಸ್ಪರ ವಿರುದ್ಧವಾದ ಎರಡು ದೊಡ್ಡ ಶಿಬಿರಗಳಾಗಿ, ನೇರವಾಗಿ ಒಂದನ್ನೊಂದನ್ನು ಎದುರಿಸುವ ಎರಡು ಮಹಾನ್ ವರ್ಗಗಳಾಗಿ, ಬೂರ್ಜ್ವಾ ವರ್ಗ ಮತ್ತು ಕಾರ್ಮಿಕ ವರ್ಗವಾಗಿ ಹೆಚ್ಚೆಚ್ಚು ರೀತಿಯಲ್ಲಿ ಒಡೆಯುತ್ತಿದೆ." ಎಂದು "ಕಮ್ಯುನಿಸ್ಟ್ ಮ್ಯಾನಿಫೆಸ್ಟೋ" ದಲ್ಲಿ ಹೇಳಿದ್ದರು.

135 ವರ್ಷಗಳ ಹಿಂದೆ ಈ ಹೇಳಿಕೆ ನೀಡಿದ್ದು ಯುರೋಪಿನಲ್ಲಿನ ಅನುಭವವನ್ನು ಆಧರಿಸಿ ಮತ್ತು ಬೆಳೆಯುತ್ತಿದ್ದ ಕೈಗಾರಿಕಾ ಕ್ರಾಂತಿ ಮತ್ತು ಹೊಸ ಕೈಗಾರಿಕಾ ಕಾರ್ಮಿಕ ವರ್ಗದ ಉದಯದ ಅನುಭವವನ್ನು ಆಧರಿಸಿ.

ಆದರೆ ಭಾರತದಲ್ಲಿ ವರ್ಗಧ್ರುವೀಕರಣ ನಡೆಯಲಾರಂಭಿಸಿದ್ದು, ಅದೂ ಮೆಲ್ಲ-ಮೆಲ್ಲನೆ ತಡೆ-ತಡೆದು, 19 ನೇ ಶತಮಾನದ ಅಂತಿಮ ದಶಕಗಳಲ್ಲಿ ಮತ್ತು 20 ನೇ ಶತಮಾನದ ಮೊದಲ ದಶಕದಲ್ಲಿ. ಬಂಡವಾಳಶಾಹೀ ವರ್ಗದ ಕೈಗಾರಿಕಾ ಮತ್ತು ವಾಣಿಜ್ಯ ವಿಭಾಗಗಳು ಮೊದಲು ಬೆಳೆದವು. ಇವರು ಪ್ರಮುಖವಾಗಿ ಬ್ರಿಟಿಶರೇ ಆಗಿದ್ದರೂ ಕೂಡಾ ಇದರಲ್ಲಿ ಭಾರತೀಯರ ಸಂಖ್ಯೆಯೂ ಸಾಕಷ್ಟಿತ್ತು. ಇದಾದ ನಂತರ ರಾಷ್ಟ್ರೀಯ ಸುಧಾರಣಾವಾದೀ ಬೂರ್ಜ್ವಾವರ್ಗದ ಮುಖಂಡತ್ವದ ರಾಷ್ಟ್ರೀಯ ವಿಮೋಚನಾ ಆಂದೋಲನ ಆರಂಭವಾಯಿತು. ಈ ಆಂದೋಲನ ಸಾಮೂಹಿಕ ಸಂಘಟನೆಯ ಪ್ರಮುಖ ಸ್ವರೂಪವನ್ನಾಗಿ ಮತ್ತು ರಾಜಕೀಯ ವೇದಿಕೆಯನ್ನಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸನ್ನು ಬೆಳೆಸಿತು.

ಇದರ ನಂತರ ಬಂದದ್ದು ಕಾರ್ಮಿಕ ವರ್ಗ ಮತ್ತು ಅದರ ಕಾರ್ಮಿಕ ಸಂಘಗಳು. ಇವುಗಳ ರಾಜಕೀಯ-ಸೈದ್ಧಾಂತಿಕ ಪ್ರತಿನಿಧಿಗಳು ರಾಜಕೀಯ ರಂಗದಲ್ಲಿ ತಮ್ಮ ಸ್ಥಾನ-ಮಾನ ಪಡೆದುಕೊಂಡು 1920 ರ ದಶಕದ ಆರಂಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷವಾಗಿ ಕಾಣಿಸಿಕೊಂಡರು. ಅಂದರೆ ಇಷ್ಟೊತ್ತಿಗೆ ಇತರೆಲ್ಲಾ ವರ್ಗಗಳು ಮತ್ತು ಸಾಮಾಜಿಕ ಗುಂಪುಗಳು ಮಾಯವಾದವು ಎಂದೇನಲ್ಲ. ಸಮಯ ಸಮಯಕ್ಕೆ ಒಂದಿಲ್ಲೊಂದು ಪಕ್ಷ ಅವರ ರಾಜಕೀಯ ಆಕಾಂಕ್ಷೆಗಳನ್ನು ಪ್ರತಿನಿಧಿಸುತ್ತಿತ್ತು. ಆದರೆ ನಾವು ಒತ್ತಿ ಹೇಳಬೇಕೆಂದಿರುವ ಪ್ರಮುಖ ವಿಷಯವೆಂದರೆ ಕಿರಿ ಬೂರ್ಜ್ವಾವರ್ಗ, ರೈತಾಪಿ ವರ್ಗ ಹಾಗೂ ಇತರ ವೃತ್ತಿನಿರತ ವರ್ಗಗಳು ಅಧಿಕ ಸಂಖ್ಯೆಯಲ್ಲಿದ್ದು ತಮ್ಮದೇ ಆದ ವರ್ಗ ಪಾತ್ರವಹಿಸಿದರೂ ಕೂಡಾ ಅವರ ಪಾತ್ರ ಹೊಸದಾಗಿ ಉದಯಿಸುತ್ತಿದ್ದ ಬೂರ್ಜ್ವಾ ಮತ್ತು ಕಾರ್ಮಿಕ ವರ್ಗಗಳು ಮತ್ತು ಅವುಗಳ ಪ್ರತಿನಿಧಿ ರಾಜಕೀಯ ಸಂಘಟನೆಗಳ ಪಾತ್ರದಷ್ಟು ನಿರ್ಣಾಯಕವಾಗಿರಲಿಲ್ಲ. ಭಾರತದಲ್ಲಿ ಬಂಡವಾಳಶಾಹೀ ಬೆಳೆದು ಬಂದ ಸಂದರ್ಭದಲ್ಲಿ ಬೂರ್ಜ್ವಾವರ್ಗ ಭೂ ಮಾಲಿಕರ ವಿಭಾಗಗಳೊಂದಿಗೆ ಮಿತ್ರತ್ವ ಬೆಳೆಸಬೇಕಾಗಿ ಬಂತು. ಬೂರ್ಜ್ವಾ ವರ್ಗದ ನೇತೃತ್ವದ ಈ ವರ್ಗ ಕೂಟದ ಐಡಿಯಾಲಜಿಯನ್ನು ಕಾಂಗ್ರೆಸ್ ಪ್ರತಿನಿಧಿಸಲಾರಂಭಿಸಿತು. ಅತ್ತ ಸಿ.ಪಿ.ಐ. ಕಾರ್ಮಿಕ ವರ್ಗದ ಐಡಿಯಾಲಜಿಯನ್ನು ಪ್ರತಿನಿಧಿಸುತ್ತಿತ್ತು.

ನಿರ್ಣಾಯಕ ಪ್ರಶ್ನೆಗಳು

ಇಂತಹ ವಾಸ್ತವತೆಗಳ ಪರಿಜ್ಞಾನವಿಲ್ಲದ, ವೈಜ್ಞಾನಿಕ ಸಂಶೋಧನೆಗೆ ಅಗತ್ಯವಾದ ಪರಿಕರಗಳೇನನ್ನೂ ಪಡೆದೇ ಇರದ ಶ್ರೀಮಾನ್ ಶೌರಿಗೆ ಕೇವಲ ಕೋಲಾಹಲ ಸೃಷ್ಟಿಸುವ ಪತ್ರಕರ್ತನೊಬ್ಬನ ಪ್ರವೃತ್ತಿಯನ್ನು ಮೀರಿ ಹೋಗಲು ಸಾಧ್ಯವಿಲ್ಲದಾಗಿದೆ. ಯಾಕೆಂದರೆ ಮುಖ್ಯತಃ ಆತನೊಬ್ಬ ಪತ್ರಕರ್ತನೇ ತಾನೇ. ಭಾರತೀಯ ಕಮ್ಯೂನಿಸ್ಟ್ ಆಂದೋಲನ ಎರಡನೇ ಮಹಾಯುದ್ಧದ ಕಾಲದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ಏಜೆಂಟರಲ್ಲದೆ ಬೇರೇನೂ ಅಲ್ಲ, ವಿದೇಶೀ ಸೋವಿಯತ್ ಸಮಾಜವಾದೀ ದೇಶಕ್ಕೆ ತಮ್ಮ ಆತ್ಮಗಳನ್ನು, ಪ್ರಜ್ಞೆಯನ್ನು ಮಾರಿಕೊಂಡ ಜನಜಂಗುಳಿ ಎಂಬುದನ್ನು "ಬಯಲಿಗೆಳೆಯಬೇಕು" ಎಂಬ ದುಷ್ಟ ಕಲ್ಪನೆಯಿಂದ ಹಾಕಿಕೊಂಡ ಯೋಜನೆ ಆತನದು. ಆದರೆ ಈ ಯೋಜನೆ ಚಾರಿತ್ರಿಕ ಸಂಶೋಧನೆಯಲ್ಲಿ ಆತನ ದಿವಾಳಿಕೋರತನವನ್ನೇ ಬಯಲು ಮಾಡಿದೆ.

ನಿಜ ! ಭಾರತೀಯ ಸ್ವಾತಂತ್ರ್ಯ ಹೋರಾಟದ ಸುಮಾರಾಗಿ ಎಲ್ಲಾ ಮೂಲಭೂತ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಪರಸ್ಪರ ತೀಕ್ಷ್ಣ ತಿಕ್ಕಾಟ ನಡೆಸುತ್ತಿದ್ದ ಎರಡು ವರ್ಗ ನಿಲುವುಗಳಿದ್ದವು—ಒಂದು ಭಾರತೀಯ ಬೂರ್ಜ್ವಾ ವರ್ಗದ್ದು, ಮತ್ತು ಇನ್ನೊಂದು ಭಾರತೀಯ ಕಾರ್ಮಿಕ ವರ್ಗದ್ದು. ರಾಷ್ಟ್ರೀಯ ಒತ್ತಾಯ "ಡೊಮಿನಿಯನ್ ಸ್ಥಾನಮಾನ ಮತ್ತು ಸ್ವಯಮಾಡಳಿತ (ಹೋಂರೂಲ್)" ದ ಪರಿಧಿಯೊಳಗೇ ಸೀಮಿತಗೊಂಡಿರಬೇಕೇ ಅಥವಾ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯ ಬೇಕೆಂದು ನೇರ ಒತ್ತಾಯವಾಗಬೇಕೇ; ಹೋರಾಟದ ವಿಧಾನ ಅಹಿಂಸೆ, ನಿಷ್ಕ್ರಿಯ ಪ್ರತಿರೋಧ ಎಂದೆನಿಸಿಕೊಂಡ ರೀತಿಯಲ್ಲಿರಬೇಕೇ ಅಥವಾ ಸಮರಶೀಲ ವಿಧಾನಗಳನ್ನು ಅನುಸರಿಸಬೇಕೇ; ಕೃಷಿ ಜನಸಮೂಹವನ್ನು ಬ್ರಿಟಿಶ್ ಭಾರತದಲ್ಲೂ ಮತ್ತು ರಾಜರುಗಳ ಆಡಳಿತದಲ್ಲಿದ್ದ ಭಾಗಗಳಲ್ಲೂ ಜಾಗೃತಿಗೊಳಿಸಿ ನೇರ, ಸಮರಶೀಲ ಕಾರ್ಯಾಚರಣೆಗೊಳಿಳಿಸುವುದು ಅಗತ್ಯವೇ; ವಿದೇಶೀ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಹಿಂದೂ—ಮುಸ್ಲಿಂ ಐಕ್ಯತೆಯನ್ನು ಸಾಧಿಸುವುದು ಕಾಂಗ್ರೆಸ್ ಪ್ರಯತ್ನಿಸಿ ವಿಫಲಗೊಂಡ ರೀತಿಯಲ್ಲೇ ಸಾಧ್ಯವೇ ಅಥವಾ ಈ ಕ್ಲಿಷ್ಟ ಸಮಸ್ಯೆಯನ್ನು ಪರಿಹರಿಸಲು ಬೇರೆ ಯಾವುದಾದರೂ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಸಾಧ್ಯತೆ ಇದೆಯೋ —ಇವೆಲ್ಲಾ ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ನಿರ್ಣಾಯಕ ಮಹತ್ವ ಹೊಂದಿದ್ದ ಪ್ರಶ್ನೆಗಳು.

ಈ ಎಲ್ಲಾ ಪ್ರಶ್ನೆಗಳ ಬಗ್ಗೆ ಪರಸ್ಪರ ಏಕ್‌ದಂ ವಿರುದ್ಧವಾದ ಎರಡು ವರ್ಗ ದೃಷ್ಟಿಕೋನಗಳು, ಬೂರ್ಜ್ವಾವರ್ಗದ ಮತ್ತು ಕಾರ್ಮಿಕ ವರ್ಗದ ವಿಭಿನ್ನ ದೃಷ್ಟಿಕೋನಗಳಂತೂ ಇದ್ದೇ ಇದ್ದವು. ಆದರೆ ಪ್ರಸ್ತುತ ನಾವು ಈ ಎಲ್ಲಾ ಪ್ರಶ್ನೆಗಳ ಪರಿಶೀಲನೆಗಿಳಿಯುವುದು ಸಾಧ್ಯವಿಲ್ಲ. ಶ್ರೀಮಾನ್ ಶೌರಿಯ ವಿರುದ್ಧ ನಮ್ಮ ಸೈದ್ಧಾಂತಿಕ ವಾಗ್ವಾದವನ್ನು ಎರಡನೇ ಮಹಾಯುದ್ಧದ ಸುಮಾರು ಆರು ವರ್ಷಗಳ ಅವಧಿಗೇ ಸೀಮಿತಗೊಳಿಸಿಕೊಳ್ಳಬೇಕು. 1939 ರ ಸೆಪ್ಟಂಬರಿನಲ್ಲಿ ನಾಝಿಗಳು ಯುರೋಪಿನಲ್ಲಿ ಯುದ್ಧ ಆರಂಭಿಸಿದಂದಿನಿಂದ 1945 ರ ಸೆಪ್ಟಂಬರ್‌ನಲ್ಲಿ ಫ್ಯಾಸಿಸ್ಟ್ ಜಪಾನ್ ಸೈನಿಕ ಶರಣಾಗತಿಗೆ ಸಹಿ ಹಾಕಿದ ವರೆಗಿನ ಅವಧಿಯಿದು. ಈ ಅವಧಿಯಲ್ಲಿ ಬೂರ್ಜ್ವಾ ನೇತೃತ್ವದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ನೇತೃತ್ವದ ಕಾರ್ಮಿಕ ವರ್ಗ ಮತ್ತು ಆಂದೋಲನಗಳು ರಾಜಕೀಯವಾಗಿ ಮತ್ತು ತಮ್ಮ ಕಾರ್ಯತಂತ್ರಗಳಲ್ಲಿ ಹೇಗೆ ನಡೆದುಕೊಂಡವು ಎಂಬುದನ್ನು ವಸ್ತುನಿಷ್ಠವಾಗಿ, ಪ್ರಾಮಾಣಿಕವಾಗಿ ಪರೀಕ್ಷಿಸೋಣ.

ಅದಕ್ಕೆ ಮೊದಲು ಭಾರತೀಯ ಬೂರ್ಜ್ವಾವರ್ಗ ಮತ್ತು ಕಾರ್ಮಿಕ ವರ್ಗ ತಮ್ಮ ವರ್ಗ ನೆಲೆಗಳು ಮತ್ತು ರಾಜಕೀಯ ಸೈದ್ಧಾಂತಿಕ ಒಲವುಗಳ ಬಗ್ಗೆ ಏನೇನು ಹೇಳಿಕೊಳ್ಳುತ್ತವೆಯೋ ಅವನ್ನು ಪರಿಶೀಲಿಸಲು ನೆರವಾಗುವ ಕೆಲವು ಅವಶ್ಯಕ ಮತ್ತು ಸಂದರ್ಭೋಚಿತ ಸಂಗತಿಗಳನ್ನು ಗಮನಿಸೋಣ.

ಮಾಜಿ ಮಾಲೀಕರ ಪ್ರಭಾವ ?

ಮಾರ್ಕ್ಸ್‌ವಾದಿಗಳ ಲೋಕದೃಷ್ಟಿ ಮತ್ತು ಕಮ್ಯೂನಿಸ್ಟರು ಅನುಸರಿಸುವ ವಿಧಾನಗಳಿಂದಾಗಿ ಸ್ವಾಭಾವಿಕವಾಗಿಯೋ ಸಾಮಾಜಿಕ ವಾಸ್ತವತೆಯ ಅವರ ವಿಶ್ಲೇಷಣೆ ಮತ್ತು ಅವರ ಕಾರ್ಯತಂತ್ರಗಳು ವರ್ಗವಾಸ್ತವತೆಯನ್ನಾಧರಿಸಿರುತ್ತವೆ. ಕಾರ್ಮಿಕ ವರ್ಗದ ಮುನ್ನಡೆಯಲ್ಲೇ ಸಮಸ್ತ ಸಮಾಜದ ಮುನ್ನಡೆ ಅಡಕವಾಗಿದೆ ಎಂದು ಅವರನ್ನುತ್ತಾರೆ. ತದ್ವಿರುದ್ಧವಾಗಿ ಬೂರ್ಜ್ವಾ ಸಿದ್ಧಾಂತಿಗಳು ಶೋಷಕ ವರ್ಗಗಳ ಹಿತಾಸಕ್ತಿಗಳೇ ಸಮಸ್ತ ಸಮಾಜದ ಹಿತಾಸಕ್ತಿಗಳು ಎಂದು ತಪ್ಪಾಗಿ ನಂಬುತ್ತಾರೆ. ಮತ್ತು ಆ ನಂಬಿಕೆಯನ್ನು ಪ್ರಚುರಗೊಳಿಸುತ್ತಾರೆ. ಈ ಎರಡು ವರ್ಗಗಳು ಸರ್ವತೋಮುಖ ಸಂಘರ್ಷದಲ್ಲಿ ತೊಡಗಿವೆ. ಭಾರತ ಇದಕ್ಕೆ ಅಪವಾದವೇನಲ್ಲ.

ಬೂರ್ಜ್ವಾ ದೃಷ್ಟಿಕೋನವನ್ನು ಸಾರಾಸಗಟು ರಕ್ತಗತ ಮಾಡಿಕೊಂಡಿರುವ ಅರುಣ್‌ಶೌರಿ ಈ ಎರಡು ವರ್ಗ ದೃಷ್ಟಿಕೋನಗಳ ನಡುವಿನ ಸಂಘರ್ಷವನ್ನು, ಮತ್ತು ಸ್ವಾತಂತ್ರ್ಯನಂತರದ 37 ವರ್ಷಗಳ ಬೆಳವಣಿಗೆಗಳಲ್ಲಿ ಇದಕ್ಕೆ ಮತ್ತಷ್ಟು ಪುಷ್ಟಿ ದೊರೆತಿರುವುದನ್ನು ಕಾಣಲು ಅಸಮರ್ಥರಾಗಿದ್ದಾರೆ. ರಾಷ್ಟ್ರೀಯ ಆಂದೋಲನದ ನೇತೃತ್ವ ವಹಿಸಿದ್ದ ಕಾಂಗ್ರೆಸ್ 1947 ರಿಂದೀಚೆಗೆ ಸುಮಾರಾಗಿ ಸಂಪೂರ್ಣವಾಗಿಯೋ ಅಧಿಕಾರದ ಗುತ್ತೇದಾರಿಕೆ ಪಡೆದಿತ್ತು. ಈ ಅವಧಿಯಲ್ಲಿ ಅದು 200 ಗುತ್ತೇದಾರಿ ಮನೆತನಗಳನ್ನು ಕಟ್ಟಿತು; ಐದು ಶೇಕಡಾ ಭೂಮಾಲಕರು 45 ಶೇಕಡಾ ಜಮೀನಿನ ಗುತ್ತಿಗೆ ಪಡೆಯಲು ಅವಕಾಶ ಕೊಟ್ಟಿತು, ಮತ್ತು ಭಾರತೀಯ ಜನಸಮೂಹದ ಐವತ್ತು ಶೇಕಡಾಕ್ಕೂ ಹೆಚ್ಚು ಜನತೆಯನ್ನು ಬಡತನದ ರೇಖೆಯ ಕೆಳಗೆ ನೂಕಿತು. ತನ್ನ ಮಾಜೀ ಉದ್ಯೋಗದಾತರಾದ ಜಾಗತಿಕ ಬ್ಯಾಂಕ್ ಮತ್ತು ಐ.ಎಂ.ಎಫ್.ಗಳಂತೆ ಅರುಣ್‌ಶೌರಿ

ಕೂಡಾ ಈ ವಾಸ್ತವತೆಗೆ ಕುರುಡಾಗಿದ್ದಾರೆ.

ಭಾರತೀಯ ಬೂರ್ಜ್ವಾ ವರ್ಗ ಬಂಡವಾಳಶಾಹಿಗಳು ಮತ್ತು ಭೂಮಾಲಕರ ವರ್ಗ ಹಿತಾಸಕ್ತಿಗಳನ್ನು ಸಾಮ್ರಾಜ್ಯಶಾಹಿಯ ವಿರುದ್ಧ ಎಷ್ಟು ಸಮರ್ಪಕವಾಗಿ ಕಾಪಾಡಿತು ಎಂಬುದಾಗಲೀ ಅಥವಾ ಕಮ್ಯೂನಿಸ್ಟರು ಕಾರ್ಮಿಕ ವರ್ಗಕ್ಕೆ ಪ್ರತಿಯಾಗಿ ಮತ್ತು ಸಾಮ್ರಾಜ್ಯಶಾಹಿ-ವಿರೋಧೀ ವಿಮೋಚನಾ ಹೋರಾಟದಲ್ಲಿ ತಮ್ಮ ಕರ್ತವ್ಯವನ್ನು ಹೇಗೆ ನಿಭಾಯಿಸಿದರು ಎಂಬುದರ ಮೌಲ್ಯಾಂಕನವಾಗಲೀ ಸದ್ಯ ಚರ್ಚಿಸುತ್ತಿರುವ ಪ್ರಶ್ನೆಯಲ್ಲ.

ಆದರೂ, ಕಮ್ಯೂನಿಸ್ಟರು ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸುವಾಗ ತಾವು ತಪ್ಪು ಮಾಡಿಯೇ ಇಲ್ಲವೆಂದೇನೂ ಹೇಳಿಕೊಳ್ಳುವುದಿಲ್ಲ. ಜತೆಗೆ 1917 ರಲ್ಲಿ ರಶ್ಯದಲ್ಲಿ ಮೊದಲ ವಿಜಯಶಾಲೀ ಸಮಾಜವಾದೀ ಕ್ರಾಂತಿಯಿಂದ ಸ್ಫೂರ್ತಿ ಪಡೆದಿರುವ ಅಂಶವನ್ನು ಕೂಡಾ, ಇತರ ಕೆಲವರು ಮಾಡುವಂತೆ ಮರೆಮಾಚುವುದಿಲ್ಲ.

ಸ್ವಂತ ವಿಚಾರಗಳು ?

ಬೂರ್ಜ್ವಾ ನಾಯಕರು, ಇದಕ್ಕೆ ತದ್ವಿರುದ್ಧವಾಗಿ, ತಮ್ಮದು ಸಂಪೂರ್ಣವಾಗಿಯೇ ದೇಶೀಯ ವಿಚಾರಸರಣಿ, ತಾವು ವೇದ, ಗೀತೆ ಮತ್ತು ಇತರ ಮಹಾಕಾವ್ಯಗಳಿಂದಲೇ ಸ್ಫೂರ್ತಿ ಪಡೆಕೊಂಡಿರುವುದು, ರಾಷ್ಟ್ರೀಯ ಪ್ರತಿಭೆಯ ಪ್ರತಿನಿಧಿಗಳೇ ತಾವು ಎಂದು ಸದಾ ಜಂಭ ಕೊಚ್ಚಿಕೊಳ್ಳುತ್ತಾರೆ. ಆದರೆ ತಾವು ರಾಜಕೀಯದ ಕಾಗುಣಿತವನ್ನು, ತತ್ವವಿಚಾರಗಳನ್ನು ಪಾಶ್ಚಿಮಾತ್ಯ ಬಂಡವಾಳಶಾಹಿ ಪ್ರಜಾಸತ್ತೆಗಳಿಂದ ಕಲಿತಿದ್ದೇವೆ, ಆರಂಭದಿಂದಲೂ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಅವರನ್ನೇ ನಕಲು ಮಾಡುತ್ತಿದ್ದೇವೆ ಮತ್ತು ಇಂದು ಕೂಡಾ ಪಾಶ್ಚಿಮಾತ್ಯ ಬಂಡವಾಳಶಾಹಿಗಳ ತಥಾಕಥಿತ ಪ್ರಜಾಪ್ರಭುತ್ವವಾದೀ ಸದ್ಗುಣಗಳು ಮತ್ತು ಅವನತಿ ಹೊಂದುತ್ತಿರುವ ಅವರ ಸಂಸ್ಕೃತಿಯ ಮೇಲೆ ಗುಲಾಮರಂತೆ ಅವಲಂಬಿಸಿಕೊಂಡಿದ್ದೇವೆ ಎಂಬ ವಾಸ್ತವ ಸಂಗತಿಗಳನ್ನು ಅವರು ಒಪ್ಪಿ ಒಪ್ಪಿಕೊಳ್ಳುತ್ತಿಲ್ಲ.

ಆದರೂ ಕೂಡಾ ಬೂರ್ಜ್ವಾ ಲೇಖಕರು, ವಿಶೇಷತಃ ಅವರ ಪೆನ್ನು ಹಿಡಿದ ಕೂಲಿಗಳು ಕಮ್ಯೂನಿಸ್ಟ್ ಸಿದ್ಧಾಂತ "ವಿದೇಶೀ", ತಾವು ಕೆಲಸ ಮಾಡಬೇಕಾಗಿ ಬಂದಿರುವ ದೇಶಗಳ ಹಿತಾಸಕ್ತಿಗಳಿಗನುಗುಣವಾಗಿ ಕಮ್ಯೂನಿಸ್ಟರು ಕೆಲಸ ಮಾಡುವುದಿಲ್ಲ, ಅವರು ಮಾಸ್ಕೋದ ಅಥವಾ ಪೀಕಿಂಗ್‌ನ ಏಜೆಂಟರು, ದೇಶದ್ರೋಹಿಗಳೆಂದೋ ಅವರನ್ನು ಬಿಟ್ಟೋಡಿದೆ ಎಂದೆಲ್ಲಾ ಹೊಲಸು ದೂಷಣೆ ಮಾಡುವುದರಲ್ಲೇ ಸದಾ ನಿರತರಾಗಿರುತ್ತಾರೆ.

ಇನ್ನೊಂದೆಡೆ ಅದೇ ಬೂರ್ಜ್ವಾ ಸಿದ್ಧಾಂತಿಗಳು ಕಮ್ಯೂನಿಸ್ಟರು ಉನ್ಮತ್ತ ರಾಷ್ಟ್ರೀಯವಾದಿಗಳು ಎಂದು ಕೂಡಾ ಸಾಧಿಸಹೊರಡುತ್ತಾರೆ. ಸೋವಿಯತ್ ಕಮ್ಯೂನಿಸ್ಟರು ಹೇಗೆ ತಮ್ಮ ಸಮಾಜವಾದಿ ಸೋವಿಯತ್ ಸಂಘವನ್ನು ಎಷ್ಟೊಂದು ಅಭಿಮಾನದಿಂದ ರಕ್ಷಿಸುತ್ತಾರೆ, ಚೀಣೀ ಕಮ್ಯೂನಿಸ್ಟರು ಚೀಣಾ ಜನತಾ ಪ್ರಜಾಪ್ರಭುತ್ವವನ್ನು ಎಷ್ಟೊಂದು ಗಾಢಾನುರಾಗದಿಂದ ರಕ್ಷಿಸುತ್ತಾರೆ, ಕ್ಯೂಬಾ, ವಿಯಟ್ನಾಂ, ಕೊರಿಯಾದ ಕಮ್ಯೂನಿಸ್ಟರು ತಮ್ಮ ಸಮಾಜವಾದಿ ಸ್ವದೇಶಗಳ ರಕ್ಷಣೆಗಾಗಿ ಹೇಗೆ ತಮ್ಮ ರಕ್ತ ಹರಿಸುತ್ತಾರೆ ಎಂಬುವರ ಬಗ್ಗೆ ಅವರೆಲ್ಲಾ ವಿಪುಲವಾಗಿ ಬರೆದಿದ್ದಾರೆ.

ಅರುಣ್‌ಶೌರಿಯಂತಹ ಪಕ್ಕಾ ಕಮ್ಯೂನಿಸ್ಟ್ ವಿರೋಧಿಗಳು ತಮ್ಮದೇ ನಿಲುವುಗಳಲ್ಲಿನ ಈ ವಿರೋಧಾಭಾಸಗಳನ್ನು ಮನಗಾಣುವಂತೆ ಮಾಡುವುದು ಸಾಧ್ಯವಿಲ್ಲ. ಶಿಥಿಲಗೊಳ್ಳುತ್ತಿರುವ ಬಂಡವಾಳಶಾಹೀ ವ್ಯವಸ್ಥೆ ಪರವಾಗಿ ತಮ್ಮನ್ನರ್ಪಿಸಿಕೊಂಡ ಈ ಜನಗಳೂ ಆ ವ್ಯವಸ್ಥೆಯ ಚಾರಿತ್ರಿಕ ನಿಯತಿಯನ್ನು ಹೊಂದಲೇಬೇಕು.

"ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಇನ್ನೂ ಅನುಭವವಿಲ್ಲದ ಪಕ್ಷವಾಗಿತ್ತು. ನಿರ್ದೇಶನ, ಸೂಚನೆಗಳಿಗೆ ಅದು ಮಾಸ್ಕೋದತ್ತವೇ ನೋಡುತ್ತಿರುತ್ತಿತ್ತು. ಈ ನಿರ್ದೇಶನ, ಸೂಚನೆಗಳು ಅದಕ್ಕೆ ಗ್ರೇಟ್‌ಬ್ರಿಟನ್ ಕಮ್ಯೂನಿಸ್ಟ್ ಪಕ್ಷ"ದ ಮೂಲಕ ಬರುತ್ತಿತ್ತು" ಎಂದಿದ್ದಾರೆ ಅರುಣ್‌ಶೌರಿ. ಸಿಪಿಐ ಗೆ ತಮ್ಮ ಸಂದೇಶ ತಲುಪಿಸಬೇಕೆಂದಿದ್ದರೆ ಅದನ್ನು ತ್ವರಿತವಾಗಿ ತಲುಪಿಸಲಾರದಷ್ಟು ಸೋವಿಯತ್ ಸಂಘ ಮತ್ತು ಅಲ್ಲಿನ ಕಮ್ಯೂನಿಸ್ಟ್ ಪಕ್ಷ ಬಡವಾಗಿದ್ದವು ಎಂದು ಶ್ರೀಮಾನ್ ಶೌರಿಯ ನಂಬಿಕೆಯೇ ? ನಾಝೀ ಸೇನೆಗಳು ಸೋವಿಯತ್ ಸಂಘದೊಳಗೆ ಅತಿಕ್ರಮಣ ನಡೆಸಿದಾಗ ಫ್ಯಾಸಿಸ್ಟ್ ವಿರೋಧೀ ಯುದ್ಧದ ಬಗ್ಗೆ ತನ್ನ ನಿಲುವನ್ನು ಕುರಿತಂತೆ ನಿರ್ಧಾರಕ್ಕೆ ಬರುವಲ್ಲಿ ವಿಳಂಬಕ್ಕೆ ಕಾರಣ ಸಿಪಿಎಸ್‌ಯು ಮತ್ತು ಸಿ.ಪಿ.ಐ. ನ ನಡುವೆ ತಕ್ಷಣ ಸಂಪರ್ಕದ ಅಭಾವ ಎಂದು ಹೇಳುವುದು, ನಿಜವಾಗಿ ತುಂಬಾ ಮೃದು ಮಾತುಗಳಲ್ಲಿ ಹೇಳುವುದಾದರೆ, ಪೆದ್ದ ಮತ್ತು ಮೂರ್ಖ ಹೇಳಿಕೆ. ಸಿ.ಪಿ.ಎಸ್.ಯು. ನಿಂದಾಗಲೀ, ಮಾಸ್ಕೋದಿಂದಾಗಲೀ ಸೂಚನೆಗಳೇನೂ ಬಂದಿರಲಿಲ್ಲ. ಸಿಪಿಐ.ನ ನಿಲುವಿನಲ್ಲಿ ಬದಲಾವಣೆಗೆ ಬೇರೆ ಕಾರಣಗಳಿವೆ. ವಿಳಂಬಕ್ಕೆ ಕೇಂದ್ರ ಸಮಿತಿ ಮತ್ತು ಪಾಲಿಟ್ ಬ್ಯೂರೋದಲ್ಲಿನ ಪಾರ್ಟಿಯೊಳಗಣ ಚರ್ಚೆ ಕಾರಣ.

ಭಂಡ ಮಾತುಗಳು

ಅರುಣ್ ಶೌರಿಯ ವಾದದ ಇನ್ನಷ್ಟು ನಿಕಟ ಪರೀಕ್ಷೆ ನಡೆಸೋಣ.

ಶ್ರೀಮಾನ್ ಶೌರಿಗೆ ಸಿ.ಪಿ.ಐ. ಮಾಸ್ಕೋದ ಮುಖವಾಣಿ, ಅದಕ್ಕೆ ಸ್ವಂತ ಮೆದುಳೇನೂ ಇರಲಿಲ್ಲ ಎಂಬ ಭಾವನೆ ಒಂದು ಧಾರ್ಮಿಕ ಮೂಢ ನಂಬಿಕೆಯೇ ಆಗಿಬಿಟ್ಟು ಆತನ ಸಮಸ್ತ ಸಂಶೋಧನೆ ಈ ಮೂಢನಂಬಿಕೆಯನ್ನಾಧರಿಸಿ ನಿಂತಿದೆ. ಆತನ ಭಂಡ ಮಾತುಗಳನ್ನು ನೋಡಿ— "ಯಾರು ಯಾರಿಗಾಗಿ ಚಿಂತನೆ ನಡೆಸುತ್ತಿದ್ದರು ಎಂಬ ಪ್ರಶ್ನೆಗೆ ಸುಲಭವಾಗಿ ಉತ್ತರ ಸಿಕ್ಕಿಬಿಡುತ್ತದೆ. ಮಾಸ್ಕೋದಲ್ಲಿನ ಕೋಮಿಂಟರ್ನ್ (ಕಮ್ಯೂನಿಸ್ಟ್ ಅಂತರಾಷ್ಟ್ರೀಯ) ಸಾಮಾಜಿಕ ಜನತಂತ್ರವಾದಿಗಳು ಜನರಿಗೆ ಪ್ರಜಾಪ್ರಭುತ್ವದ ಬಗ್ಗೆ ಭ್ರಮೆಯುಣಿಸುತ್ತಿರುವುದರಿಂದ ಅವರು ಮುಖ್ಯ ಶತ್ರುಗಳು ಎಂದು ಘೋಷಿಸಿದಾಗ ನಮ್ಮ ಕಮ್ಯೂನಿಸ್ಟರು ಈ ಅಪ್ಪಣೆಯನ್ನು ಅಕ್ಷರಶಃ ಪಾಲಿಸಿದರು. ಕೋಮಿಂಟರ್ನ್ "ಬೇಡ" ಎಂದು ನಿರ್ಧರಿಸಿದಾಗ ಪರಿಸ್ಥಿತಿ ಬದಲಾಗಿತ್ತು. ಅದೀಗ ಸಾಮಾಜಿಕ ಜನತಂತ್ರವಾದಿಗಳು ಮತ್ತು ಅವರಂತಹರೊಡನೆ ಮಿತ್ರತ್ವಕ್ಕೆ ಕರೆ ನೀಡಿತು. ನಮ್ಮ ಕಮ್ಯೂನಿಸ್ಟರು ಮತ್ತೆ ಅದರ ಅಪ್ಪಣೆಯನ್ನು ಅಕ್ಷರಶಃ ಪಾಲಿಸಿದರು. ಸಮಾಜವಾದಿಗಳು ಕಾಂಗ್ರೆಸ್ಸಿಗರು ಮುಂತಾದವರೊಂದಿಗೆ ಗೆಳೆತನ ಬೆಳೆಸಿದರು" ಎಂದಿರುವುದು ಮಾತ್ರವಲ್ಲ— "1941 ರ ಜೂನ್ 22 ರಂದು ಹಿಟ್ಲರ್ ಸೋವಿಯತ್ ಸಂಘದ ಮೇಲೆಧಾಳಿ ಮಾಡಿದಂದಿನಿಂದ 1941ರ ಡಿಸೆಂಬರ್ 1 ರಂದು ಭಾರತ ಕಮ್ಯೂನಿಸ್ಟ್ ಪಕ್ಷ ತನ್ನ ನಿಲುವಿನಲ್ಲಿ ಬದಲಾವಣೆ ಘೋಷಿಸಿದ ದಿನದವರೆಗಿನ ಆರು ತಿಂಗಳುಗಳು ನಿರ್ಣಾಯಕವಾಗಿದ್ದವು" ಎಂದಿದ್ದಾರೆ. ಇದು ನಿಜವಾಗಿದ್ದರೆ, ಭಾರತದ ಕಮ್ಯೂನಿಸ್ಟ್ ಪಕ್ಷ ಜೂನ್ 22, 1941 ರಿಂದ ಡಿಸೆಂಬರ್ 1, 1941 ರವರೆಗೆ ಏತಕ್ಕಾಗಿ ಕಾಯುತ್ತಿತ್ತು ? ನಮ್ಮ ಪ್ರತಿಭಾವಂತ ನವನೇಮಿತ ಸಂಶೋಧಕ ಪತ್ರಕರ್ತ ಶೌರಿಗೆ ಉತ್ತರ ಸಿಕ್ಕಿಬಿಟ್ಟಿದೆ— ಕಮ್ಯೂನಿಸ್ಟ್ ಪಕ್ಷಕ್ಕೆ ಅಂತೂ ಕೊನೆಗೆ 1941 ರ ನವೆಂಬರ್ 6 ರಂದು, "ಗ್ರೇಟ್ ಬ್ರಿಟನ್, ಅಮೇರಿಕಾ ಸಂಸ್ಥಾನಗಳು ಮತ್ತು ಸೋವಿಯತ್ ಸಂಘ ಒಂದೇ ಶಿಬಿರದಲ್ಲಿ ಒಗ್ಗಟ್ಟಾಗಿವೆ" ಎಂದು ಸ್ಟಾಲಿನ್ ಸೋವಿಯತ್ ಕ್ರಾಂತಿಯ 24 ನೇ ವಾರ್ಷಿಕೋತ್ಸವದಲ್ಲಿ ಪ್ರಕಟಿಗೊಳಿಸಿದಾಗ ಜ್ಞಾನೋದಯವಾಯಿತು."

ರಾಜಕೀಯವನ್ನೇನೂ ಅಭ್ಯಾಸ ಮಾಡಿರದ ಒಬ್ಬ ಎಳಸು ವ್ಯಕ್ತಿಯೊಂದಿಗೆ ನಾವು ಚರ್ಚಿಗಿಳಿಯ ಬೇಕಾಗಿ ಬಂದಿರುವುದು ದುರದೃಷ್ಟವೇ ಸರಿ. ಯಾಕೆಂದರೆ ಈ ವ್ಯಕ್ತಿಗೆ ಸೋವಿಯತ್ ಸಂಘದೊಳಗೆ ನಾಝಿಗಳು ನುಗ್ಗಿದ ಹತ್ತು ದಿನಗಳಲ್ಲೇ ಅಂದರೆ 1941 ರ ಜುಲೈ 3 ರಂದೇ ಸ್ಟಾಲಿನ್ ರೇಡಿಯೋ ಭಾಷಣ ಮಾಡಿದ್ದರು ಎಂಬ ಸಂಗತಿ ತಿಳಿದೇ ಇಲ್ಲ. ಫ್ಯಾಸಿಸ್ಟ್ ವಿರೋಧೀ ಯುದ್ಧದ ಸ್ವಭಾವ ಮತ್ತು ಅದರಿಂದಾಗಬಹುದಾದ ಪರಿಣಾಮಗಳನ್ನು ಜಗತ್ತಿಗೆ ತಿಳಿಸಲು ಸ್ಟಾಲಿನ್ 1941 ರ ನವೆಂಬರ್ 6 ರ ತನ್ನ ಭಾಷಣದ ವರೆಗೆ ಅಂದರೆ ಐದು ತಿಂಗಳು ಕಾಯುತ್ತಾ ಕೂರಲಿಲ್ಲ.

ಕಳಪೆ "ಸಂಶೋಧನೆ"

1941 ರ ಜುಲೈ 3 ರಂದು ಸೋವಿಯತ್ ನಾಗರಿಕರನ್ನು, ಕೆಂಪು ಸೇನೆ ಮತ್ತು ನಾವಿಕ ಪಡೆಯನ್ನುದ್ದೇಶಿಸಿ ಸ್ಟಾಲಿನ್ ತಿಳಿಯಪಡಿಸಿದ ಸಂಗತಿಗಳು ಇವು— "ಫ್ಯಾಸಿಸ್ಟ್ ಜರ್ಮನಿಯೊಂದಿಗೆ ಯುದ್ಧವನ್ನು ಎರಡು ಸೇನೆಗಳ ನಡುವಿನ ಒಂದು ಸಾಮಾನ್ಯ ಯುದ್ಧ ಎಂದು ತಿಳಿಯಲು ಸಾಧ್ಯವಿಲ್ಲ. ಅದು ಫ್ಯಾಸಿಸ್ಟ್ ಸೇನೆಯ ವಿರುದ್ಧ ಸಮಸ್ತ ಸೋವಿಯತ್ ಜನತೆಯ ಯುದ್ಧ. ಫ್ಯಾಸಿಸ್ಟ್ ದಮನಕಾರರ ವಿರುದ್ಧ ನಡೆಯುತ್ತಿರುವ ಜನತೆಯ ಈ ದೇಶಪ್ರೇಮೀ ಯುದ್ಧದ ಉದ್ದೇಶ ನಮ್ಮ ದೇಶಕ್ಕೆ ಕಟ್ಟಿರುವ ಅಪಾಯವನ್ನು ತಪ್ಪಿಸುವುದು ಮಾತ್ರವೇ ಅಲ್ಲ ಜರ್ಮನ್ ಫ್ಯಾಸಿಸಂನ ನೊಗದಡಿಯಲ್ಲಿ ನರಳುತ್ತಿರುವ ಎಲ್ಲಾ ಯೂರೋಪಿಯನ್ ದೇಶಗಳ ಜನತೆಗಳಿಗೆ ನೆರವಾಗುವುದು ಕೂಡಾ. ಈ ವಿಮೋಚನಾ ಯುದ್ಧದಲ್ಲಿ ನಾವು ಏಕಾಂಗಿಗಳಲ್ಲ. ಈ ಮಹಾನ್ ಯುದ್ಧದಲ್ಲಿ ಯೂರೋಪಿನ, ಮತ್ತು ಅಮೇರಿಕಾದ ಜನತೆ ಮಾತ್ರವಲ್ಲ ಹಿಟ್ಲರೈಟ್ ದುರಾಳಿತಗಾರರಿಗೆ ಗುಲಾಮರಾಗಿ ಬಿಟ್ಟಿರುವ ಜರ್ಮನ್ ಜನತೆ ಕೂಡಾ ನಮ್ಮ ನಿಜವಾದ ಮಿತ್ರರಾಗಿದ್ದಾರೆ. ನಮ್ಮ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ನಮ್ಮ ಯುದ್ಧ ತಮ್ಮ ಸ್ವಾಧೀನತೆ, ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳಿಗಾಗಿ ಯೂರೋಪ್ ಮತ್ತು ಅಮೇರಿಕಾದ ಜನರುಗಳು ನಡೆಸುತ್ತಿರುವ ಹೋರಾಟದೊಂದಿಗೆ ಒಂದಾಗುತ್ತದೆ."

ರಾಜಕೀಯದ ಪ್ರಾಥಮಿಕ ಜ್ಞಾನವಾದರೂ ಇರುವ ಯಾವುದೇ ವ್ಯಕ್ತಿ ಸ್ಟಾಲಿನ್‌ರ ಮನವಿಯ ಅರ್ಥವನ್ನು ತಿಳಿದು ಕೊಳ್ಳಬಲ್ಲ. ಸಿ.ಪಿ.ಎಸ್.ಯು ನಿಂದ ಸಿಪಿಐ ಗೆ ಸಂದೇಶ ರವಾನೆಯಲ್ಲಿನ ವಿಳಂಬವೇ ನಿಲುವಿನ ಬದಲಾವಣೆಗೆ ಕಾರಣ ಎಂದು ಶ್ರೀಮಾನ್ ಶೌರಿ ಹೇಳಿದಂತೆ ಹೇಳುವುದು ನಿಜಕ್ಕೂ ಒಂದು ಠಕ್ಕತನ. ತೀವ್ರ ಸ್ವರೂಪದಲ್ಲಿ ಬದಲಾದ ಯುದ್ಧ ಪರಿಸ್ಥಿತಿಗಳಲ್ಲಿ ನಾವು ಅನುಸರಿಸಬೇಕಾದ ಕಾರ್ಯತಂತ್ರಗಳನ್ನು ನಿರ್ಧರಿಸುವಲ್ಲಿ ವಿಳಂಬಕ್ಕೆ ಕಾರಣ ಹೊಸ ವಾಸ್ತವತೆಗಳಿಗೆ ಅನುಗುಣವಾದ ಮಾರ್ಗವನ್ನು ನಿರ್ಧರಿಸಲು ಕೇಂದ್ರ ಸಮಿತಿ ಮತ್ತು ಪಾಲಿಟ್ ಬ್ಯೂರೋದಲ್ಲಿ ನಡೆಯುತ್ತಿದ್ದ ಆಂತರಿಕ ಚರ್ಚೆ. ಸಂಪರ್ಕದ ಅಭಾವವಿತ್ತು. ಅಥವಾ ಭೂಮಂಡಲವ್ಯಾಪೀ ಫ್ಯಾಸಿಸ್ಟ್-ವಿರೋಧೀ ಯುದ್ಧದ ಪರವಾಗಿ ಸಂಪೂರ್ಣವಾಗಿ ಸಂಘಟನೆ ನಡೆಸುವ ಇಚ್ಛೆಯಿರಲಿಲ್ಲ ಎಂಬುದು ಶುದ್ಧ ಅಪ್ರಮಾಣಿಕ ಆಪಾದನೆ.

ಮೃದುವಾಗಿ ಹೇಳುವುದಾದರೆ ಶೌರಿಯ ಬೆಳಕು ಚೆಲ್ಲುವ ಸಂಶೋಧನೆಯಿಂದ ಹೊರಬಂದಿರುವುದು ಇಂಥಾ ಕಳಪೆತನವಷ್ಟೇ. ಸಿ.ಪಿ.ಐ. ಫ್ಯಾಸಿಸ್ಟ್ ವಿರೋಧೀ ಯುದ್ಧಕ್ಕೆ ಬೆಂಬಲ ನೀಡಿದ ಇಂತಹ ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ಭಾರತ ಪಾತ್ರವಹಿಸದಂತೆ ಮಾಡಲು ಯತ್ನಿಸಿದವರಿಗೆ ವಿರೋಧ ವ್ಯಕ್ತಪಡಿಸಿದ ಹಿಂದಿನ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಅರುಣ್ ಶೌರಿ ಮತ್ತು ಆತನ ಬಳಗ ಏಕ್‌ದಂ ಅಸಮರ್ಥವಾಗಿದೆ. ಸಿ.ಪಿ.ಐ.ಗಾಗಿ ಮಾಸ್ಕೋ ಚಿಂತನೆ ನಡೆಸುತ್ತಿತ್ತು ಎಂಬ ಸುಳ್ಳನ್ನು ಪಸರಿಸುತ್ತಿರುವ ಶ್ರೀಮಾನ್ ಶೌರಿಯ ಹಿಂದೆ ಆತನಿಗಾಗಿ ಚಿಂತನೆ ನಡೆಸುತ್ತಿರುವವರು ಯಾರು ಎಂದು ನಮಗೆ ತಿಳಿಯ ಬೇಕಾಗಿದೆ. ತನ್ನ ರಾಜಕೀಯ ವಿರೋಧಿಗಳನ್ನು ಬಯ್ಯುವುದು ಶೌರಿಯ ಮೌಲಿಕ ಶೋಧನೆಯೂ ಅಲ್ಲ; ಕಮ್ಯೂನಿಸ್ಟರು ಮಾಸ್ಕೋದ ಅಥವಾ ಒಂದು ವಿದೇಶೀ ಶಕ್ತಿಯ ಏಜೆಂಟರು, ಶೌರಿಯಂತಹ ಕಮ್ಯೂನಿಸ್ಟ್-ವಿರೋಧಿಗಳೆಲ್ಲಾ ಹುಟ್ಟಾ ದೇಶಭಕ್ತರು, ಸಾಚಾ ರಾಷ್ಟ್ರೀಯವಾದಿಗಳು ಮತ್ತು ಪ್ರತಿಭಾವಂತ ಮೌಲಿಕ ಚಿಂತಕರು ಎಂದು ಸಾಧಿಸಲು ಇದು ಪುರಾವೆಗಳನ್ನೂ ಒದಗಿಸುವುದಿಲ್ಲ.

ಕಮ್ಯೂನಿಸ್ಟ್ ಅಂತರಾಷ್ಟ್ರೀಯ ಅಸ್ತಿತ್ವದಲ್ಲಿತ್ತು ಮತ್ತು 1943 ರಲ್ಲಿ ಅದರ ವಿಸರ್ಜನೆಯಾಗುವವರೆಗೆ ಸಿಪಿಐ ಅದಕ್ಕೆ ಸಂಬದ್ಧವಾಗಿತ್ತು ಎನ್ನುವುದು ಶ್ರೀಮಾನ್ ಶೌರಿಯ ಹೊಸ ಶೋಧನೆಯೇನೂ ಅಲ್ಲ. ಪ್ರಥಮ ಸಮಾಜವಾದೀ ಪ್ರಭುತ್ವದ ಯುಗಾಂತರಕಾರೀ ಸಾಧನೆಯ ಪರಿಣಾಮವಾಗಿ ಪ್ರಭುತ್ವದ ಅಗಾಧ ಔನತ್ಯ ಶ್ರೀಮಾನ್ ಶೌರಿಯ ಯೋಗ್ಯತೆಯ ಸಂಶೋಧಕರ ವಿನಃ ಬೇರೆ ಎಲ್ಲಾ ಸಂಶೋಧಕರಿಗೂ

(6ನೇ ಪುಟ ನೋಡಿ)

ರಾಜಕೀಯವನ್ನೇನೂ ಅಭ್ಯಾಸ ಮಾಡಿರದ ಒಬ್ಬ ಎಳಸು ವ್ಯಕ್ತಿಯೊಂದಿಗೆ ನಾವು ಚರ್ಚಿಗಿಳಿಯ ಬೇಕಾಗಿ ಬಂದಿರುವುದು ದುರದೃಷ್ಟವೇ ಸರಿ. ಯಾಕೆಂದರೆ ಈ ವ್ಯಕ್ತಿಗೆ ಸೋವಿಯತ್ ಸಂಘದೊಳಗೆ ನಾಝಿಗಳು ನುಗ್ಗಿದ ಹತ್ತು ದಿನಗಳಲ್ಲೇ ಅಂದರೆ 1941 ರ ಜುಲೈ 3 ರಂದೇ ಸ್ಟಾಲಿನ್ ರೇಡಿಯೋ ಭಾಷಣ ಮಾಡಿದ್ದರು ಎಂಬ ಸಂಗತಿ ತಿಳಿದೇ ಇಲ್ಲ. ಫ್ಯಾಸಿಸ್ಟ್ ವಿರೋಧೀ ಯುದ್ಧದ ಸ್ವಭಾವ ಮತ್ತು ಅದರಿಂದಾಗಬಹುದಾದ ಪರಿಣಾಮಗಳನ್ನು ಜಗತ್ತಿಗೆ ತಿಳಿಸಲು ಸ್ಟಾಲಿನ್ 1941 ರ ನವೆಂಬರ್ 6 ರ ತನ್ನ ಭಾಷಣದ ವರೆಗೆ ಅಂದರೆ ಐದು ತಿಂಗಳು ಕಾಯುತ್ತಾ ಕೂರಲಿಲ್ಲ.

ಇತ್ತೀಚಿನ ಬೆಳವಣಿಗೆಗಳ ಕುರಿತು....

(2 ನೇ ಪುಟದಿಂದ)

ಯನ್ನು, ಅಸ್ಸಾಂ ಅನ್ನು ಒಂದು ರಾಜ್ಯವನ್ನಾಗಿ ಉಳಿಸಲು ಸಾಧ್ಯವೆಂದು ಅತಿಸಿದೆ.

ಜಮ್ಮು ಮತ್ತು ಕಾಶ್ಮೀರದ ನ್ಯಾಶನಲ್ ಕಾನ್‌ಫರೆನ್ಸ್ ಸರ್ಕಾರವನ್ನು ಅಭದ್ರಗೊಳಿಸಲು ಕಾಂಗ್ರೆಸ್ [ಐ] ಪಕ್ಷ ಅನುಸರಿಸುತ್ತಿರುವ ಉದ್ದೇಶಪೂರ್ವಕ ಹುನ್ನಾರಗಳ ಕುರಿತು ಪಿ.ಬಿ. ತನ್ನ ಕಳವಳ ವ್ಯಕ್ತಪಡಿಸಿದೆ ಕಾಂಗ್ರೆಸ್ (ಐ) ಪಕ್ಷವು ಕೇಂದ್ರದಲ್ಲೂ ಮತ್ತು ರಾಜ್ಯದಲ್ಲೂ ಅಬ್ದುಲ್ಲಾ ಸರ್ಕಾರಕ್ಕೆದುರಾಗಿ ನಡೆಸುತ್ತಿರುವ ಚಳುವಳಿ, ಹೇಗಾದರೂ ಮಾಡಿ ಸರ್ಕಾರವನ್ನು ಉರುಳಿಸಬೇಕೆಂಬ ಕಾಂಗ್ರೆಸ್ಸಿನ ಪ್ರಯತ್ನವನ್ನು ಎತ್ತಿ ತೋರಿಸುತ್ತಿದೆ. ಇದು ಪಾಕಿಸ್ಥಾನ ಪರವಾದ ಶಕ್ತಿಗಳನ್ನು ಬಲಪಡಿಸುವಲ್ಲಿ ಸಹಾಯಕವಾಗುತ್ತದೆಂದು ಪಿ.ಬಿ. ಅಭಿಪ್ರಾಯ ಪಟ್ಟಿದೆ.

ಸಿಕ್ಕಿಂ ರಾಜ್ಯದಲ್ಲಿ ನಡೆದ ಈಚಿನ ಘಟನೆಗಳು ಕಾಂಗ್ರೆಸ್ ಅಧಿಕಾರಶಾಹೀ ಸ್ವಭಾವವನ್ನು ಪ್ರದರ್ಶಿಸಿದೆ. ಸಂವಿಧಾನದ 356 ನೇ. ಪರಿಚ್ಛೇದವನ್ನು ದೇಶದ ಪ್ರಜಾಸತ್ತಾತ್ಮಕ ಜನತೆಯ ಅಭಿಪ್ರಾಯವು ಸರ್ವಾನುಮತದಿಂದ ಖಂಡಿಸಿದ್ದರೂ ಕೂಡ ಕಾಂಗ್ರೆಸ್ ಅದನ್ನು ಉಪಯೋಗಿಸಿಕೊಂಡು ಸಿಕ್ಕಿಂ ವಿಧಾನ ಸಭೆಯಲ್ಲಿ ಬಹುಮತ ಪಡೆದಿದ್ದ ಭಂಡಾರಿ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿಗಳ ಆಡಳಿತವನ್ನು ಹೇರುವಂತಹ ಏಕಪಕ್ಷೀಯ ಕ್ರಮ ಕೈಗೊಂಡಿರುವುದು ಜನತೆಯ ಆಶೋತ್ತರಗಳನ್ನು ಉಲ್ಲಂಘಿಸಿ ರಾಜ್ಯಪಾಲರ ಅಧಿಕಾರವನ್ನು ದುರುಪಯೋಗಿಸಿದ ಕ್ರಮವಾಗಿದೆ ಎಂಬುದಾಗಿ ಪೊಲಿಟ್‌ಬ್ಯೂರೋ ತನ್ನ ಅನಿಸಿಕೆ ವ್ಯಕ್ತಪಡಿಸಿದೆ.

ಪೊಲಿಟ್‌ಬ್ಯೂರೋ ಮುಂದುವರಿದು ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶದ ರಾಜ್ಯಪಾಲರ ಏಕಪಕ್ಷೀಯ ಕ್ರಮಗಳನ್ನು ಖಂಡಿಸಿದೆ. ಪೊಲ್ಕಂಡ ರಾಜ್ಯಪಾಲರುಗಳು ಆಯಾ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಚುನಾಯಿತ ಸಚಿವ ಸಂಪುಟದ ಸಲಹೆಗಳನ್ನು ಉಲ್ಲಂಘಿಸಿದ್ದಾರೆ. ಪ. ಬಂಗಾಳದ ರಾಜ್ಯಪಾಲರು ಶಾಸನ ಸಭೆ ಅಂಗೀಕರಿಸಿದ ಮಸೂದೆಗೆ ಒಪ್ಪಿಗೆಯನ್ನು ನೀಡದೆ ಅದನ್ನು ರಾಷ್ಟ್ರಪತಿಯವರಿಗೆ ವಹಿಸಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರವು ಸಂಬಂಧ ಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳೊಡನೆ ಸಮಾಲೋಚಿಸುವ ಸೌಜನ್ಯವನ್ನು ಕೂಡ ತೋರಿಸದೆ ರಾಜ್ಯಪಾಲರುಗಳನ್ನು ವರ್ಗಾವಣೆ ಮಾಡುತ್ತಿದೆ. ಇವುಗಳೆಲ್ಲಾ ರಾಜ್ಯ ಸರ್ಕಾರಗಳ ಸ್ವಯಮಾಧಿಕಾರಗಳನ್ನು ಕತ್ತರಿಸುವ ಕೇಂದ್ರದ ಪ್ರಯತ್ನಗಳಾಗಿವೆ. ಇವುಗಳ ವಿರುದ್ಧ ಸಂಘಟಿತ ಚಳವಳಿಯನ್ನು ನಡೆಸಬೇಕಾಗುತ್ತದೆಂದು ಪಿ.ಬಿ. ಎಚ್ಚರಿಸಿದೆ.

ಮೇ 20-21 ರಂದು ಕೆಲವು ವಿಧಾನಸಭಾ ಸ್ಥಾನಗಳಿಗೆ ನಡೆದ ಮರು ಚುನಾವಣೆಗಳನ್ನು ಪರಾಮರ್ಶಿಸಿದ ಪಿ. ಬಿ. ಕಾಂಗ್ರೆಸ್ ಗಳಿಸಿದ 9 ಸ್ಥಾನಗಳಲ್ಲಿ ಎರಡು ಸ್ಥಾನಗಳು ಕೇರಳ ಮತ್ತು ತಮಿಳುನಾಡುಗಳಲ್ಲಿ ಅದರ ಮಿತ್ರ ಪಕ್ಷಗಳು ನೀಡಿದ ಕಾಣಿಕೆಗಳಾಗಿವೆ ಎಂದು ತಿಳಿಸಿದೆ. ಕೇರಳದ ಅದರ ಮಿತ್ರ ಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಕೋಮು ಆಧಾರದ ಮೇಲೆ ಮುಸ್ಲಿಂ ಜನಾಂಗವನ್ನು ಪ್ರತ್ಯೇಕವಾಗಿ ಸಂಘಟಿಸಲು ಪ್ರಯತ್ನಿಸುತ್ತಿದೆ. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ ಅಧ್ಯಕ್ಷರು ಸಂಚಾಲಕರಾಗಿರುವ ದಿ ಆಲ್ ಇಂಡಿಯಾ ಮುಸ್ಲಿಂ ಫ್ರಂಟ್ ಆಂಧ್ರ ಪ್ರದೇಶದ ಆಸಿಫ್ ನಗರ ಕ್ಷೇತ್ರದಲ್ಲಿ ಕಾಂಗ್ರೆಸ್ಸನ್ನು ಸೋಲಿಸಿದೆ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ ಎಡರಂಗದ ವಿರುದ್ಧ ಪ್ರತಿಯೊಬ್ಬರನ್ನೂ ಎತ್ತಿ ಕಟ್ಟಲು ಪ್ರಯತ್ನಿಸುತ್ತಿದೆ.

ಕಾಂಗ್ರೆಸ್ಸಿನ ಈ ಎಲ್ಲಾ ರಾಜಕೀಯ ಆಟಗಳನ್ನು ಎದುರಿಸಲು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗಟ್ಟಾಗಿ ದೇಶವ್ಯಾಪಿ ಆಂದೋಲನ ನಡೆಸಬೇಕಾಗಿದೆಯೆಂದು, ಪೊಲಿಟ್‌ಬ್ಯೂರೋ ಕರೆ ನೀಡಿದೆ.

○

ಫೆದರ್ ಲೈಟ್ ಕಾರ್ಮಿಕರ ವಿಜಯ

ಬೆಂಗಳೂರಿನ ಫೆದರ್ ಲೈಟ್ ಕಾರ್ಖಾನೆಯ ಕಾರ್ಮಿಕರ ಸತತ ಹೋರಾಟದ ಫಲವಾಗಿ ಆರು ತಿಂಗಳ ಹಿಂದೆ ಮುಚ್ಚಲ್ಪಟ್ಟಿದ್ದ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸಲು ಹಾಗೆಯೇ ಕಾರ್ಮಿಕರಿಗೆ ರಕ್ಷಣೆ ನೀಡಿ, ಬೇಡಿಕೆ ಕೊಡಿಸಲೂ ಸಾಧ್ಯವಾಗಿದೆ. ಅದೂ ಸಿ. ಐ. ಟಿ. ಯು. ಮುಖಂಡತ್ವದಿಂದ. ಮುಚ್ಚಿರುವ ಕಾರ್ಖಾನೆಯನ್ನು ಕೂಡಲೇ ತೆರೆಯಬೇಕೆಂದೂ, ಅನ್ಯಾಯವಾಗಿ ನೌಕರಿಯಿಂದ ತೆಗೆದು ಹಾಕಲ್ಪಟ್ಟ 37 ಕಾರ್ಮಿಕರನ್ನು ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದೂ ಶೇ 18 ರಷ್ಟು ಬೋನಸ್ಸು ಕೊಡಬೇಕೆಂದೂ, ಪ್ರತಿ ಕಾರ್ಮಿಕನಿಗೆ ಪ್ರತಿ ತಿಂಗಳು ರೂ 80 ವೇತನ ಹೆಚ್ಚಿಸಬೇಕೆಂದೂ ಜೂನ್ 6 ರಂದು ಒಪ್ಪಂದವಾಯಿತು. ಹೋರಾಟದ ಅವಧಿಗೆ ಒಂದು ತಿಂಗಳ ಸಂಬಳ ಕೊಡಲು ಮಾಲಿಕರು ಒಪ್ಪಿದ್ದಾರೆ. ಧೀರ ಫೆದರ್ ಲೈಟ್ ಕಾರ್ಮಿಕರನ್ನು ಸಿ.ಐ.ಟಿ.ಯು ಅಭಿನಂದಿಸುತ್ತದೆ, ಈ ದೀರ್ಘ ಹೋರಾಟದಲ್ಲಿ ಸಹಾಯ ಮಾಡಿದವರಿಗೆಲ್ಲಾ ಯೂನಿಯನ್ ಕಾರ್ಯದರ್ಶಿ ಆರ್. ಶ್ರೀನಿವಾಸ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಎ. ಕೆ. ಗೋಪಾಲನ್ ಭವನ ನಿಧಿಗೆ

ಭಾರತದ ದುಡಿಯುವ ವರ್ಗದ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಅತ್ಯಂತ ಪ್ರೀತಿಯ ಮುಖಂಡರಾದ ಎ. ಕೆ. ಗೋಪಾಲನ್ ಅವರ ಹೆಸರಿನ ಭವನವನ್ನು ದಿಲ್ಲಿಯಲ್ಲಿ ರಚಿಸಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಕಚೇರಿಯನ್ನಾಗಿ ಹಾಗೆಯೇ ದೇಶದ ದುಡಿಯುವ ವರ್ಗದ ಕ್ರಾಂತಿಯ ಕೇಂದ್ರವನ್ನಾಗಿ ಮಾಡಬೇಕೆಂಬ ಮಹೋದ್ದೇಶದಿಂದ, (ಈ ಕಟ್ಟಡ ಕಟ್ಟಲು ರೂ 80 ಲಕ್ಷ) ಅಂದಾಜು ಮಾಡಲಾಗಿದೆಯೆಂದೂ, ಪಾರ್ಟಿ ಸದಸ್ಯರೂ ಸಾಮೂಹಿಕ ಸಂಘಟನೆಗಳೂ ಸರ್ವ ರೀತಿಯಿಂದಲೂ ಧನ ಸಹಾಯ ಮಾಡಬೇಕೆಂದು ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಕರೆಕೊಟ್ಟಿತ್ತು. ಕರ್ನಾಟಕ ರಾಜ್ಯ ಸಮಿತಿ ಕೂಡ ಕರೆ ಕೊಟ್ಟಿದೆ.

ಆದರೆ ದಿನನಿತ್ಯ ಹಲವಾರು ಹೋರಾಟಗಳನ್ನು ನಡೆಸುತ್ತಿರುವ ಸಾಮೂಹಿಕ ಸಂಘಟನೆಗಳಾಗಲೀ, ತಮ್ಮ ಜೀವನವನ್ನೇ ಕ್ರಾಂತಿಗಾಗಿ ಮುಡುಪಿಟ್ಟ ಪಾರ್ಟಿ ಸದಸ್ಯರಾಗಲೀ ಪಾರ್ಟಿಯ ಕರೆಗೆ ಓಗೊಟ್ಟು ಎ. ಕೆ. ಗೋಪಾಲನ್ ಭವನಕ್ಕೆ ಧನಸಹಾಯ ಮಾಡಲು ನಿರೀಕ್ಷೆಯಷ್ಟು ಮುಂದೆ ಬಾರದಿರುವುದು ವ್ಯಸನಕರ ಸಂಗತಿಯಾಗಿದೆ.

ಪಾರ್ಟಿ ಮತ್ತು ಹೋರಾಟದಲ್ಲಿ ವಿಶ್ವಾಸವಿಟ್ಟ ಎಲ್ಲ ಪಾರ್ಟಿ ಸದಸ್ಯರೂ, ತಮ್ಮ ಮತ್ತು ತಮ್ಮ ಸ್ನೇಹಿತರಿಂದ ಕೂಡಲೇ ಹಣ ಕೊಡಿಸಿ, ತಮ್ಮ ಕ್ರಾಂತಿಕಾರಿ ಜವಾಬ್ದಾರಿಯನ್ನು ಪೂರೈಸುತ್ತಾರೆಂಬ ನಂಬಿಕೆ ನಮಗಿದೆ. ಆದ್ದರಿಂದ ಕಾಮ್ರೇಡ್ಸರೇ, ಕಾರ್ಯಕರ್ತರೇ ಹಿತೈಷಿಗಳೇ, ಸ್ವಯಂಸ್ಫೂರ್ತಿಯಿಂದ ಎ. ಕೆ. ಜಿ. ಭವನಕ್ಕೆ ಧನ ಸಹಾಯ ಮಾಡಿರಿ.

ರಾಜ್ಯ ಸರ್ಕಾರದ ಶಿಕ್ಷಣ ಮಸೂದೆ ಕುರಿತು

[3ನೇ ಪುಟದಿಂದ]

ರಣೆಗಳನ್ನು ತರಬೇಕು. ಆ ದೃಷ್ಟಿಯಲ್ಲಿ ಈ ಮಸೂದೆಯು ಬಹಳ ಮಹತ್ವದ್ದಾಗಿದೆ.

ಕೊಠಾರಿ ವಿದ್ಯಾಭ್ಯಾಸ ಕಮಿಷನು ಬಹಳ ಸ್ಪಷ್ಟವಾಗಿಯೇ ಹೇಳಿದೆ: ಸರಕಾರವು ವಿದ್ಯಾಭ್ಯಾಸದಂತಹ ಕ್ಲಿಷ್ಟ ಪ್ರಕ್ರಿಯೆಯಲ್ಲಿ ಕೇಂದ್ರೀಯ ಸ್ಥಾನವನ್ನು ಪಡೆದಿದೆ. ಅದು ಎಲ್ಲಾ ಶಾಲಾ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನು ಹೊರಬೇಕಾಗಿದೆ. ಒಂದು ಆಧುನಿಕ ಸಮಾಜದ ಬೆಳೆಯುತ್ತಿರುವ ವಿದ್ಯಾಭ್ಯಾಸದ ಅವಶ್ಯಕತೆಗಳನ್ನು ಸರಕಾರ ಮಾತ್ರ ಪೂರೈಸಲು ಸಾಧ್ಯ....... ...."

ಇನ್ನು ಈ ಮಸೂದೆಯಲ್ಲಿ ನ್ಯೂನತೆಗಳು ಇಲ್ಲವೆಂದಲ್ಲ ಹಲವಾರು ನ್ಯೂನತೆಗಳು ಎದ್ದು ತೋರುವಂತಿವೆ.

ಈ ಮಸೂದೆಯು ವಿದ್ಯಾಭ್ಯಾಸದಲ್ಲಿ ಅಧ್ಯಾಪಕರ ಪಾತ್ರ, ಏನು ಎಂಬುದನ್ನು ನಿರ್ದಿಷ್ಟಪಡಿಸಲಿಲ್ಲ. ಲಕ್ಷಾಂತರ ಅಧ್ಯಾಪಕರ ಸ್ಪಷ್ಟವಾಗಿ ಚರ್ಚಿಸಲ್ಪಟ್ಟ ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳುವ ಕುರಿತು ನಿರ್ದಿಷ್ಟವಾದ ಅಂಶಗಳು ಈ ಮಸೂದೆಯಲ್ಲಿಲ್ಲ. ಶಾಲಾ ಕಾಲೇಜುಗಳ ಸೆಕ್ರೆಟರಿಗಳಿಗೆ ಅತ್ಯಧಿಕ ಅಧಿಕಾರಿಗಳನ್ನು ಕೊಟ್ಟಂತಿದೆ.

ಅದೇ ರೀತಿ ಏಳನೇ ದರ್ಜೆಯ ನಂತರ ವಿದ್ಯಾರ್ಥಿಗಳು ಒಂದಲ್ಲ ಒಂದು ಜೀವನದ ಕಸುಬುಗಳಿಗೆ ತಯಾರಿ ಮಾಡಿಕೊಳ್ಳುವ ಜವಾಬ್ದಾರಿ ಇರುವಾಗ, ವಿದ್ಯಾರ್ಥಿಗಳಿಗೆ ಹೈಸ್ಕೂಲು ಮತ್ತು ಕಾಲೇಜು ಘಟ್ಟಗಳಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಚರ್ಚಿಸಿ ತಿಳಿಯಪಡಿಸುವ ಏರ್ಪಾಡು ಈ ಮಸೂದೆಯಲ್ಲಿ ಇಲ್ಲವೇ ಇಲ್ಲ.

ವಿದ್ಯಾಭ್ಯಾಸ ಮಸೂದೆಯಲ್ಲಿ ಎಲ್ಲಿಯೂ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಒಳಗೊಳ್ಳುವ ಏರ್ಪಾಡೇ ಇಲ್ಲದಿರುವುದು ಈ ಮಸೂದೆಯ ಇನ್ನೊಂದು ಕೊರತೆ.

ಕೊನೆಯದಾಗಿ ಈ ಮಸೂದೆಯು "ಯಾವುದೇ ನಿಯಂತ್ರಣ ಇಲ್ಲದೆ ಇರುವ ಈಗಿನ ಪರಿಸ್ಥಿತಿಯಲ್ಲಿ" ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸ್ಪಷ್ಟ ಯೋಜನೆ ನಿಯಂತ್ರಣ, ಉದ್ದೇಶದ ಕಡೆಗೆ ಗಮನ ಇತ್ಯಾದಿಯನ್ನು ಸಾಧಿಸಲು ಮಾಡಿದ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ–ಇದನ್ನು ನಾನು ಸ್ವಾಗತಿಸುತ್ತೇನೆ.

(5ನೇ ಪುಟದಿಂದ)

ಮನವರಿಕೆಯಾಗುವ ಸಂಗತಿ. ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಸ್ಥಾಪನೆ ಮತ್ತು ಅದರಲ್ಲಿ ಸಿ. ಪಿ. ಎಸ್. ಯು. ನ ಪಾತ್ರ ಪ್ರಥಮ ಸಮಾಜವಾದೀ ಪ್ರಭುತ್ವ ಜಗತ್ತಿನಾದ್ಯಂತ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಲ್ಲಿ ಎಂತಹ ಸ್ಫೂರ್ತಿ ಮತ್ತು ವಿಶ್ವಾಸ ಉಂಟುಮಾಡಿತ್ತು ಎನ್ನುವುದನ್ನು ಪ್ರತಿಫಲಿಸುತ್ತದೆ. ಅಷ್ಟೇ ಅಲ್ಲ ವರ್ಗ ಹೋರಾಟದ ಜಾಗತಿಕ ಸ್ವಭಾವವನ್ನು ಮತ್ತು ಅದರಿಂದಾಗಿ ಈ ಹೋರಾಟವನ್ನು ಮುನ್ನಡೆಸುವಲ್ಲಿ ಕಾರ್ಮಿಕರ ಪ್ರಥಮ ಪ್ರಭುತ್ವದ ಹೊರಬೇಕಾದ ಹೆಚ್ಚಿನ ಹೊಣೆಗಾರಿಕೆಯನ್ನೂ ಅದು ಒತ್ತಿ ಹೇಳುತ್ತದೆ.

ಇದನ್ನೆಲ್ಲಾ ಬದಿಗೊತ್ತಿ ಸಿ.ಪಿ.ಐ. ಸೇರಿದಂತೆ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳು "ಮಾಸ್ಕೋ ಏಜೆಂಟರು" ಎನ್ನುವುದು ಸಾಮಾನ್ಯವಾಗಿ 'ಪೀತ' ಪತ್ರಿಕೆಗಳಲ್ಲಷ್ಟೇ ಕಾಣಸಿಗುವ ಕೀಳುಮಟ್ಟದ ಅಪಪ್ರಚಾರ, ಆದರೆ ಶ್ರೀಮಾನ್ ಶೌರಿ ಮಾತ್ರ ಅದನ್ನು "ಚಾರಿತ್ರಿಕ ಸಂಶೋಧನೆ" ಎಂದು ಕೊಚ್ಚಿಕೊಳ್ಳುತ್ತಾರೆ. ಚಾರಿತ್ರಿಕ ವಿಶ್ಲೇಷಣೆಯ ಮಟ್ಟವಂತೂ ಈ 'ಸಂಶೋಧನೆ'ಗಳಲ್ಲಿ ಇಲ್ಲವೇ ಇಲ್ಲ.

ಸ್ವರ್ಣ ಮಂದಿರದಿಂದ ಸೈನ್ಯ ಹಿಂತೆಗೆಯಿರಿ

ಸ್ವರ್ಣ ಮಂದಿರದಿಂದ ಸೈನ್ಯವನ್ನು ಆದಷ್ಟು ತೀವ್ರ ಹಿಂತೆಗೆಯಬೇಕೆಂದೂ ಅಕಾಲ ತಖ್ತ್ ಮುಖಂಡತ್ವದ ಐದು ಪುರೋಹಿತರಿಗೆ ಸ್ವರ್ಣಮಂದಿರದ ಆಡಳಿತೆಯನ್ನು ಒಪ್ಪಿಸಬೇಕೆಂದೂ, ಅವರೇ ಮಂದಿರದ ರಿಪೇರಿ ನಡೆಸಿ, ಭಕ್ತರ ಪ್ರವೇಶಕ್ಕೆ ಅನುಕೂಲ ಮಾಡಿಕೊಡಲು ಸಾಧ್ಯವಾಗಲೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಸರಕಾರವನ್ನು ಒಂದು ನಿರ್ಣಯದ ಮೂಲಕ ಕೇಳಿಕೊಂಡಿದೆ.

ಸ್ವರ್ಣ ಮಂದಿರದಲ್ಲಿ ಅಡಗಿಕೊಂಡಿದ್ದ ಹಿಂಸಾಚಾರಿಗಳನ್ನು, ಛಿದ್ರಕಾರಿ ಶಕ್ತಿಗಳನ್ನೂ ಹೊರಗೆ ಹಾಕಲು ಸೈನ್ಯ ಉಪಯೋಗಿಸಿದ ನಂತರ ಉಂಟಾದ ಪರಿಸ್ಥಿತಿಯನ್ನು ವಿಮರ್ಶಿಸಿ, ಪಂಜಾಬಿನ ಪರಿಸ್ಥಿತಿ ಇನ್ನೂ ಗಂಭೀರವಾಗಿದೆಯೆಂದೂ, ಇಂಥ ಪರಿಸ್ಥಿತಿಯಲ್ಲಿ ದೇಶದ ಸಮಗ್ರತೆಯನ್ನು ಉಳಿಸಿಕೊಳ್ಳುವುದರ ಸಲುವಾಗಿ ತೀವ್ರ ಗಮನ ಹರಿಸುವುದು ಅತ್ಯಗತ್ಯವೆಂದೂ ಕೇಂದ್ರ ಸಮಿತಿ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳ ಗಮನ ಸೆಳೆದಿದೆ.

ಸ್ವರ್ಣ ಮಂದಿರಕ್ಕೆ ಸೈನ್ಯ ಕಳುಹಿಸಿರುವುದನ್ನು ಸಿ ಪಿ.ಐ (ಎಂ) ವಿರೋಧಿಸಿಲ್ಲ ನಿಜ. ಆದರೆ ಕೇಂದ್ರ ಸರಕಾರ ವಿರೋಧ ಪಕ್ಷಗಳ ಸೂಚನೆಯನ್ನು ಈ ಮುಂಚೆಯೇ ಒಪ್ಪಿಕೊಂಡಿದ್ದರೆ ಇಂಥ ತೀವ್ರ ಕ್ರಮ ಕೈಗೊಳ್ಳುವ ಅಗತ್ಯವಿರಲಿಲ್ಲೆಂದೂ, ಸರಕಾರದ ಈಗಿನ ಕ್ರಮದಿಂದಾಗಿ ತೀವ್ರವಾದಿಗಳ ತಳ ವಿಶಾಲಗೊಳ್ಳಲು ಸಹಾಯಕವಾಗಿದೆಯೆಂದೂ, ಕೇಂದ್ರ ಸಮಿತಿಯ ನಿರ್ಣಯವನ್ನು ಪ್ರಕಟಿಸಿದ ಪಾಲಿಟ್ ಬ್ಯೂರೋ ಸದಸ್ಯರಾದ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ರಾಜ್ಯಾದ್ಯಂತ ರೈತ-ಕಾರ್ಮಿಕರ ಬೇಡಿಕೆಗಳಿಗಾಗಿ ಬೃಹತ್ ಚಳವಳಿ

ಕಳೆದ ಜೂನ್ 11 ರಂದು ರಾಜ್ಯಾದ್ಯಂತ ವಿವಿಧ ಭಾಗಗಳಲ್ಲಿ ಸ್ಫೂರ್ತಿಶಾಲಿಯಾಗಿ ರೈತ ಕಾರ್ಮಿಕರು ನಡೆಸಿದ ಸರಕಾರೀ ಕಚೇರಿಗಳ ಪಿಕೆಟಿಂಗ್, ಬೇಡಿಕೆಗಳಿಗಾಗಿ ನಡೆದ ಪ್ರದರ್ಶನ, ಬಹಿರಂಗಸಭೆ ಪೋಲಿಸರಿಂದ ನಡೆದ ಬಂಧನ ಮುಂತಾದ ವಿವರಗಳನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ತಡವಾಗಿ ಬಂದ ವರದಿಗಳನ್ನು ಈ ಸಲ ಅಚ್ಚು ಮಾಡುತ್ತಿದ್ದೇವೆ.

ಕೆ.ಜಿ.ಎಫ್.

ಜೂನ್ 11 ರಂದು ಸುಮಾರು 300 ಮಂದಿ ಮೆರವಣಿಗೆಯಲ್ಲಿ ಹೊರಟು ಬಿ ಜಿ ಎಂ ಎಲ್. ಕಚೇರಿಯ ಎದುರು ಬೆಳಗ್ಗೆ 9 ಗಂಟೆಯಿಂದ ಪಿಕೆಟಿಂಗ್ ನಡೆಸಿದರು ಮಧ್ಯಾಹ್ನ 1 ಗಂಟೆಗೆ ಪೋಲಿಸರು 300 ಮಂದಿಯನ್ನು ಬಂಧಿಸಿ ನಂತರ ಸಂಜೆ ಬಿಡುಗಡೆ ಮಾಡಿದರು ಪಿಕೆಟಿಂಗ್ ನೇತೃತ್ವವನ್ನು ಕಾ. ಸವರಿದಾಸ್, ಟಿ. ಎಸ್. ಮಣಿ ಮುಂತಾದವರು ವಹಿಸಿದ್ದರು

ಬೈಲಹೊಂಗಲ

ಪ್ರಾಂತ ರೈತ ಸಂಘದ ಕರೆಯ ಮೇರೆಗೆ ರಾಜ್ಯಾದ್ಯಂತ ಪಿಕೆಟಿಂಗ್ ಕಾರ್‍ಯಕ್ರಮದನ್ವಯ 11-6-84 ರಂದು ಸಾಣಿಕೊಪ್ಪ ಗ್ರಾಮ ಘಟಕದ 70 ಜನ ಸದಸ್ಯರು ಬೈಲಹೊಂಗಲ ತಹಶೀಲದಾರ್ ಆಫೀಸಿಗೆ ಕಾಲ್ನಡಿಗೆ ಜಾಥಾ ಹೋಗಿ ಪಿಕೆಟಿಂಗ್ ನಡೆಸಿ ಅರೆಸ್ಟ್ ಆದರು. ಜಾಥಾದುದ್ದಕ್ಕೂ ಕೆಂಪು ಧ್ವಜ ಮತ್ತು ಬ್ಯಾನರುಗಳ ಮೆರವಣಿಗೆ ನೋಡುಗರ ಕಣ್ಸೆಳೆಯುತ್ತಿತ್ತು. ಜಾಥಾ ಮತ್ತು ಪಿಕೆಟಿಂಗ್ ಕಾರ್‍ಯಕ್ರಮದ ಮುಂದಾಳತ್ವವನ್ನ ಘಟಕದ ಅಧ್ಯಕ್ಷ ದಂಡಪ್ಪಣ್ಣ ಉಳ್ಳೆಗಡ್ಡಿ, ಮತ್ತು ಕಾರ್ಯದರ್ಶಿ ಬಸವಲಿಂಗಯ್ಯ ವರಕುಂಬಿಯವರು ವಹಿಸಿದ್ದರು.

ಗುಲ್ಬರ್ಗಾ

ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾ ಘಟಕವು ತನ್ನ ಬೇಡಿಕೆಗಳಾದ ಸರ್ಕಾರಿ ಜಮೀನು ಉಳಮೆ ಮಾಡಿದವರಿಗೆ ಹಕ್ಕು ಪತ್ರ, ಕೃಷಿ ಕೂಲಿಕಾರರಿಗೆ ನಿವೃತ್ತಿ ವೇತನ, ಕನಿಷ್ಠ ಕೂಲಿ, ರೈತ ಬೆಳೆದ ಬೆಳೆಗೆ ಯೋಗ್ಯ ಬೆಲೆ, ಸಮಗ್ರ ಬೆಳೆ ವಿಮಾ ಯೋಜನೆ ಜಾರಿಗೆ ಗೊಳಿಸುವುದು. ಅಯೋರಿ ನಾಲಾ ನೀರಾವರಿ ಯೋಜನೆ ಕಾರ್ಯಗತ ಗೊಳಿಸುವುದು. ಆಳಂದ ತೋಟಗಾರಿಕಾ ಯೋಜನಾ ಸಂಘದಲ್ಲಿ ಪ್ರಾತಿನಿಧ್ಯ, ಗೊಬ್ಬರ ಕಲಬೆರಕೆಯಲ್ಲಿ ನಷ್ಟ ಅನುಭವಿಸಿದವರಿಗೆ ಪರಿಹಾರ ಧನ, ಅರಣ್ಯ ಭೂಮಿಯಿಂದ ರೈತರ ಉಚ್ಚಾಟನೆ ತಡೆಯುವುದು, ಪ್ರತಿ ಹಳ್ಳಿಯಲ್ಲಿ ಎನ್. ಆರ್. ಇ. ಪಿ. ಪ್ರಾರಂಭಿಸುವುದು ಇತ್ಯಾದಿ 46 ಬೇಡಿಕೆಗಳಿಗೆ ಒತ್ತಾಯಿಸಿ ಹಾಗೂ ರಾಜ್ಯ ಸಮಿತಿಯ ಕರೆಯ ಮೇರೆಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪಿಕೆಟಿಂಗ್ ನಡೆಸಿತು.

ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಆಳಂದ, ಯಾದಗಿರ, ಜೇವರ್ಗಿ, ಗುಲ್ಬರ್ಗಾ ತಾಲೂಕುಗಳಿಂದ ಸಾವಿರಕ್ಕೂ ಹೆಚ್ಚು ರೈತರು ನೆಹರು ಗಂಜಿ ನಿಂದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಹೊರಟು ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಪಿಕೆಟಿಂಗ್‌ನಲ್ಲಿ ಭಾಗ ವಹಿಸಿದರು.

ಪಿಕೆಟಿಂಗ್ ಮತ್ತು ಮೆರವಣಿಗೆಯ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿಗಳಾದ ಕಲ್ಲಪ್ಪ ಕಿರಣಗಿ, ಆಳಂದ ರೈತ ಸಂಘದ ಅಧ್ಯಕ್ಷರಾದ ಶ್ರೀ ಬಾಬು ಪಿರಮಶೆಟ್ಟಿ, ಯಾದಗಿರದ ರೈತ ಸಂಘದ ಅಧ್ಯಕ್ಷರಾದ ಮನೋಹರ ಪಾಟೀಲ್, ಮೇಘರಾಜ ಕಠಾರೆ, ಸಿಐಟಿಯು ಕಾರ್ಯದರ್ಶಿ ಕಾ। ಹಸನ್ ಖಾನ್‌ರವರು ವಹಿಸಿದರು.

ಸಿಐಟಿಯು ಕಾರ್ಮಿಕ ಸಂಘಟನೆ, ಗುಲ್ಬರ್ಗಾ ವಿಶ್ವವಿದ್ಯಾಲಯದ ಶಿಕ್ಷಕೇತರ ಸಂಘಟನೆಯ ಪದಾಧಿಕಾರಿಗಳು ಹೋರಾಟಕ್ಕೆ ಬೆಂಬಲಾರ್ಥವಾಗಿ ರೈತರ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಸುರಿಯುವ ಮಳೆಯಲ್ಲಿ ನೆನೆಯುತ್ತ ಯಶಸ್ವಿಯಾಗಿ ಪಿಕೆಟಿಂಗ್ ನಡೆಸಿರುವುದು ಇಂದಿನ ರೈತರ ಹೋರಾಟದ ವೈಶಿಷ್ಟವಾಗಿತ್ತು.

ರಾಯಚೂರು ಜಿಲ್ಲೆಯಾದ್ಯಂತ ಧರಣಿ ಮುಷ್ಕರ, ಪಿಕೆಟಿಂಗ್, ಬಂಧನ.

ರಾಯಚೂರು ಜಿಲ್ಲೆಯಾದ್ಯಂತ ಸುಮಾರು ಆರು ಸಾವಿರ ರೈತ, ಕೃಷಿ ಕಾರ್ಮಿಕ, ಕಾರ್ಮಿಕರು ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಜೂನ್ ಹನ್ನೊಂದರಂದು ಐದು ತಾಲೂಕುಗಳಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು. 40 ಬೇಡಿಕೆಗಳನ್ನು ಪ್ರಚಾರ ಮಾಡಲು ಮೂರು ಸಾವಿರ ಕರಪತ್ರಗಳನ್ನು ಹಾಕಿ ಹಂಚಲಾಯಿತು.

ರಾಯಚೂರು ತಾಲೂಕು

ರಾಯಚೂರು ತಾಲೂಕು ಸಮಿತಿಯೂ 5000 ಕರಪತ್ರಗಳನ್ನು, ಸಿ.ಐ.ಟಿ.ಯು. ನಗರ ಸಮಿತಿಯೂ 5000, ಕರಪತ್ರಗಳನ್ನು ಹಂಚಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಡಲಾಗಿತ್ತು. ಜೂನ್ ಹನ್ನೊಂದರಂದು ನಗರದ ಸಿನಿಮಾ, ಕಾರ್ಖಾನೆಗಳು ಮುಚ್ಚಲ್ಪಟ್ಟು ನೂರಾರು ಕಾರ್ಮಿಕರು, ರೈತರು, ಮೆರವಣಿಗೆ ನಡೆಸಿ ಒಟ್ಟು 700, ರೈತ, ಕಾರ್ಮಿಕರು ತಹಸೀಲ ಕಛೇರಿಯ ಆವರಣದಲ್ಲಿ ಧರಣಿ ನಡೆಸಿದರು. ಕೊನೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ದೇವದುರ್ಗ ತಾಲೂಕು

ದೇವದುರ್ಗ ತಾಲೂಕು ಸಮಿತಿಯು, 4000 ಕರಪತ್ರಗಳನ್ನು ಹಾಕಿ ತಾಲೂಕಾದ್ಯಂತ ಪ್ರಚಾರ ಮಾಡಿ ತಾಲೂಕಿನ ಮುಖ್ಯ ಗ್ರಾಮವಾದ ಜಾಲಹಳ್ಳಿಯಲ್ಲಿ ಬಂದ್ ಆಚರಿಸಿ, ಅಂದು ನಡೆಯ ಬೇಕಾದ ಸಂತೆಯನ್ನೂ ಬಂದ್‌ಮಾಡಿ ರೈತ-ಕಾರ್ಮಿಕರನ್ನು ಮೆರವಣಿಗೆಯಲ್ಲಿ ಕರೆ ತಂದರು. ನಗರದ ಹೊರಗಡೆ ಸುಮಾರು 1500 ರೈತ, ಕೃಷಿ ಕಾರ್ಮಿಕರು ಜಮಾಯಿಸಿ ಭಾರಿ ಮೆರವಣಿಗೆಯನ್ನು ತೆಗೆದು ತಹಸೀಲ ಕಛೇರಿಗೆ ಹೋಗಿ ಸಭೆ ನಡೆಸಲಾಯಿತು. ಕಾ। ಚಂದ್ರಶೇಖರ್‌ಬಾಳೆ, ಕಾ. ದೇವೇಂದ್ರಪ್ಪ ಪತ್ತಾರ್, ಕಾ. ಕಾಶಿನಾಥ್, ಸಭೆಯನ್ನುದ್ದೇಶಿಸಿ ಮಾತನಾಡಿ, ನಂತರ, ಧರಣಿಯನ್ನು ನಡೆಸಿ ಕೊನೆಯಲ್ಲಿ ತಹಸೀಲ್ದಾರ್, ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 300 ಜನ ಮಹಿಳೆಯರು ಪಾಲ್ಗೊಂಡಿದ್ದರು. ಶ್ರೀಮತಿ ಮೈತ್ರಿಪಾಟೀಲ, ನೇತೃತ್ವವನ್ನು ವಹಿಸಿದ್ದರು.

ಸಿಂಧನೂರು ತಾಲ್ಲೂಕ್

ಜೂನ್ ಹನ್ನೊಂದರಂದು ಸುಮಾರು 3000 ರೈತ ಕಾರ್ಮಿಕರು ತಹಶೀಲ್ದಾರ್ ಕಚೇರಿಯ ಮುಂದೆ ಯಶಸ್ವಿಯಾಗಿ ಪಿಕೆಟಿಂಗ್ ನಡೆಸಿ, 2000 ರೈತ ಕಾರ್ಮಿಕರು, ಬಂಧನಕ್ಕೊಳಗಾದರು.

ಇದು ನಗರದ ಹಾಗೂ ತಾಲ್ಲೂಕಿನ ಜನತೆಯ ಮೇಲೆ ಭಾರಿ ಪ್ರಭಾವವನ್ನು ಬೀರಿದ್ದು ಜೂನ್ ಹನ್ನೊಂದರ ತಯಾರಿಯಾಗಿ ಜೂನ್ ನಾಲ್ಕರಿಂದ ತಹಸೀಲ್ದಾರ್ ಕಾರ್ಯಾಲಯದ ಮುಂದೆ ಧರಣಿ ನಡೆಸಲಾಗಿತ್ತು. ಪ್ರತಿ ದಿನ ನೂರಾರು ರೈತ ಕಾರ್ಮಿಕರ ಭಾಗವಹಿಸಿದರು, ಒಂದು ದಿನ ಸ್ಥಳೀಯ ಶಾಸಕರ ಮನೆಯ ಮುಂದೆ ಧರಣಿಯನ್ನು ನಡೆಸಲಾಯಿತು. ತಾಲ್ಲೂಕಿನ ಈ ಕಾರ್ಯಕ್ರಮ ಚಾರಿತ್ರಿಕ ದಾಖಲೆಯನ್ನು ಸ್ಥಾಪಿಸಿತು.

ಜೂನ್ ಹನ್ನೊಂದರ ಭಾರಿ ಸಭೆಯನ್ನು ಪಿಕೆಟಿಂಗ್ ಮುಂಚೆ, ಕಾಂ. ಲಿಂಗಪ್ಪ, ಬಿ. ಕರ್ನಾಟಕ ಪ್ರಾಂತ ರೈತಸಂಘ, ಕಾಂ. ಬಸವರಾಜ ಕೆ., ಕಾಂ. ನಾರಾಯಣ ಕೆ., ಡಿ. ವೈ. ಎಫ್. ಐ. ದ ಪರವಾಗಿ, ಕಾಂ. ಸಿ. ಎಸ್. ಹಿರೇಮಠ, ಸಿ. ಐ. ಟಿ. ಯುದ ಪರವಾಗಿ, ಮಾತನಾಡಿ, ರಾಜ್ಯ ಸಮಿತಿ ಕರೆಕೊಟ್ಟ ನಲ್ವತ್ತು ಬೇಡಿಕೆಗಳನ್ನು ಈಡೇರಿಸಲು. ಒತ್ತಾಯಿಸಿ ಪಿಕೆಟಿಂಗ್ ಮಾಡಲು ಕರೆಕೊಟ್ಟರು.

ಬಂಧನಕ್ಕೊಳಗಾದವರನ್ನು ಸಾಯಂಕಾಲ ಬಿಡುಗಡೆ ಮಾಡಲಾಯಿತು.

ಮಾನ್ವಿ ತಾಲ್ಲೂಕ್

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕರೆಯ ಮೇರೆಗೆ ಮಾನ್ವಿ ತಾಲ್ಲೂಕ್ ಸಮಿತಿ 5000 ಕರಪತ್ರಗಳನ್ನು ಹಾಕಿಸಿ ತಾಲ್ಲೂಕಿನಾದ್ಯಂತ ಪ್ರಚಾರ ನಡೆಸಲಾಗಿ ಸುಮಾರು 400 ಜನ ರೈತ ಕೃಷಿಕಾರ್ಮಿಕರು ತಹಸೀಲ್ದಾರರ ಕಚೇರಿಯ ಆವರಣಲ್ಲಿ ಧರಣಿ ಮುಷ್ಕರವನ್ನು ನಡೆಸಿದರು, ಇದರ ನೇತೃತ್ವವನ್ನು ಕಾಂ. ಡಾ. ಬಾಲಚಂದ್ರ, ಕಾ. ಶಿವರುದ್ರಪ್ಪನವರು ವಹಿಸಿದ್ದರು.

ಲಿಂಗಸುಗೂರು ತಾಲ್ಲೂಕ್

ರಾಜ್ಯ ಸಮಿತಿಯ ಕರೆಯ ಮೇರೆಗೆ ಪ್ರಾಂತ ರೈತ ಸಂಘ ಲಿಂಗಸುಗೂರು ತಾಲ್ಲೂರ್ ಸಮಿತಿಯೂ 10000 ಕರಪತ್ರಗಳನ್ನು ಮುದ್ರಿಸ ತಾಲ್ಲೂಕಾದ್ಯಂತ ಪ್ರಚಾರ ಕೈಗೊಳ್ಳಲಾಗಿ ಸುಮಾರು 400 ಜನ, ರೈತ ಕಾರ್ಮಿಕರು, ಮೆರವಣಿಗೆ ನಡೆಸಿ, ಕೊನೆಯಲ್ಲಿ ತಹಸೀಲ್ದಾರ್ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ತಹಸೀಲ್ದಾರರಿಗೆ ಮನವಿಯನ್ನು ಸಲ್ಲಿಸಲಾಯಿತು.

ಮುಂಚೆ ನಡೆದ ಸಭೆಯನ್ನುದ್ದೇಶಿಸಿ ಕಾಂ. ಕಂಡೆಪ್ಪ ಸಂಚಾಲಕರು ಕರ್ನಾಟಕ ಪ್ರಾಂತ ರೈತಸಂಘ ತಾಲ್ಲೂಕ್ ಸಮಿತಿ ಹಾಗೂ ಕಾಂ. ಶಂಕರಪ್ಪ ನಾಗಲಾಪುರ, ವಕೀಲರು ಹಾಗೂ ಇತರ ಎಸ್. ಎಫ್ ಐ. ಸಂಗಾತಿಗಳು ಮಾತನಾಡಿದರು.

ವಿರಾಜಪೇಟೆ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ 11-6-1984 ರಂದು ವಿರಾಜಪೇಟೆ ತಾಲ್ಲೂಕು ತಹಸೀಲ್ದಾರರ ಆಫೀಸ್ ಮುಂದುಗಡೆ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್, ಮತ್ತು ರೈತಸಂಘಗಳ ಪ್ರತಿನಿಧಿಗಳು ಪಿಕೆಟಿಂಗ್ ನಡೆಸಿದರು. ಇನ್ನೂರಕ್ಕೂ ಹೆಚ್ಚು ಮಂದಿ ಮಹಿಳೆಯರೂ ಬಂಧನಕ್ಕೊಳಗಾದರು. ರೈತ ಸಂಘದ ಕೊಡಗು ಶಾಖೆಯ ಮುಖಂಡರಾದ ಶ್ರೀ ಸುಬ್ಬಯ್ಯನವರನ್ನೂ ಬಂಧಿಸಲಾಗಿತ್ತು.

ಹರಿಹರ

11-6-1984 ರಂದು ರಾಜ್ಯಾದ್ಯಂತ ನಡೆದ ರೈತರ ಹೋರಾಟಕ್ಕೆ ಬೆಂಬಲಾರ್ಥ ಸಿ. ಐ. ಟಿ. ಯು ರಾಜ್ಯ ಸಮಿತಿ ಕರೆಯ ಮೇರೆಗೆ ಹರಿಹರದಲ್ಲಿ ಒಂದು ದಿನದ ಯಶಸ್ವಿ ಮುಷ್ಕರ ಮತ್ತು ತಾಲ್ಲೂಕು ಕಚೇರಿಯನ್ನು ಪಿಕೆಟಿಂಗ್ ನಡೆಸಲಾಯಿತು.

ಬೆಳಗ್ಗೆ 8-00 ಗಂಟೆಯಿಂದ ಕೆಂಪು ಬಾವುಟಗಳನ್ನು ಹಿಡಿದು ಹರಿಹರದ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆನಡೆಸಿದ ಕಾರ್ಮಿಕರು10-30ಕ್ಕೆ ತಹಸೀಲ್ದಾರ್ ಕಚೇರಿಯನ್ನು ತಲುಪಿ ಪಿಕೆಟಿಂಗ್ ನಡೆಸಲು ಪ್ರಾರಂಭಿಸಿದರು. ಸುಮಾರು ಮಧ್ಯಾಹ್ನ 4-30ರ ವರೆಗೆ ನಡೆದ ಈ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಕಿರ್ಲೋಸ್ಕರ್ ಕಾರ್ಮಿಕರು, ಪಾಲಿಫೈಬರ್ ಕಾರ್ಮಿಕರು, ಬೀಡಿ ಕಾರ್ಮಿಕರು, ಗ್ವಾಲೀಯಾರ್ ರೆಯಾನ್ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಹಂತ ಹಂತವಾಗಿ ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದವರನ್ನು ಪ್ರತ್ಯೇಕ ಗುಂಪುಗಳಾಗಿ ಪೋಲಿಸರು ಬಂಧಿಸಿದರು. ಈ ಪಿಕೆಟಿಂಗ್ ಕಾರ್ಯಕ್ರಮದಿಂದಾಗಿ ಇಡೀ ದಿನ ತಾಲ್ಲೂಕು ಕಚೇರಿಯಲ್ಲಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿದ್ದವು.

ಈ ಎಲ್ಲಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಹರಿಹರದ ಎಲ್ಲಾ ಕಾರ್ಮಿಕರನ್ನು ಸಿ.ಐ.ಟಿ.ಯು ಸಮನ್ವಯ ಸಮಿತಿ ಪರವಾಗಿ ಕಾಂ. ಆರ್. ಬಿ. ಅಂಗಡಿಯವರು ಅಭಿನಂದಿಸಿದ್ದಾರೆ.

ಶಿಡ್ಲಘಟ್ಟ

ಶಿಡ್ಲಘಟ್ಟದಲ್ಲಿ ಕಾ. ದೊರೆಸ್ವಾಮಿ ಮತ್ತು ಕೆ. ಎಂ. ವೆಂಕಟೇಶ್ ಅವರ ನೇತೃತ್ವದಲ್ಲಿ ನೂರು ಮಂದಿ ರೈತರು, ಕಾರ್ಮಿಕರು, ತಾಲ್ಲೂಕ್ ಆಫೀಸಿನ ಎದುರು ಪಿಕೇಟಿಂಗ್ ನಡೆಸಿ ಬಂಧನಕ್ಕೊಳಗಾದರು. ತಹಸೀಲ್ದಾರ್ ಅವರು ತಮ್ಮ ಕಚೇರಿಯ ಅಂದಿನ ವಹಿವಾಟುಗಳನ್ನು ಜೂನ್ 21ಕ್ಕೆ ಮುಂದೂಡಿದರು.

ಚಿಂತಾಮಣಿ

ಸುಮಾರು 300 ಮಂದಿ ತಾಲ್ಲೂಕ್ ಆಫೀಸಿಗೆ ಮೆರವಣಿಗೆಯಲ್ಲಿ ತೆರಳಿ ಪಿಕೆಟಿಂಗ್ ನಡೆಸಿದರು. ಇದರ ನೇತೃತ್ವವನ್ನು ಕಾ. ಲಕ್ಷ್ಮಣರೆಡ್ಡಿ, ಅಶ್ವಥರೆಡ್ಡಿ ಶ್ರೀನಿವಾಸರೆಡ್ಡಿ ಮುಂತಾದವರು ವಹಿಸಿದ್ದರು

(8ನೇ ಪುಟ ನೋಡಿ)

ರಾಜ್ಯಾದ್ಯಂತ ರೈತ ಕಾರ್ಮಿಕರ ಪಿಕೆಟಿಂಗ್

(7ನೇ ಪುಟದಿಂದ)

ಧಾರವಾಡ

ಸಿ.ಐ.ಟಿ.ಯು. ರಾಜ್ಯ ಸಮಿತಿಯು ಕರೆಯ ಮೇರೆಗೆ ಪ್ರಾಂತ ರೈತ ಸಂಘದ ಚಳುವಳಿಗೆ ಬೆಂಬಲ ನೀಡಲು 11 ರಂದು ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಬೃಹತ್ ಪಿಕೆಟಿಂಗ್ ನಡೆಸಲಾಯ್ತು. ಸುಮಾರು 1000 ಜನರನ್ನು ಪೋಲಿಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಇವರಲ್ಲಿ ವಸತಿಹೀನರು, ಭೂಹೀನರು, ಹಾಗೂ ಕಾರ್ಮಿಕರು ಸೇರಿದ್ದಾರೆ. ಅಂದು ಹುಬ್ಬಳ್ಳಿ ಧಾರವಾಡಗಳಲ್ಲಿಯು ಸುಮಾರು 2500 ಜನ ಕಾರ್ಮಿಕರು ತಮ್ಮ ಕೆಲಸಗಳಿಗೆ ಹಾಜರಾಗದೆ ಸಾರ್ವತ್ರಿಕ ಮುಷ್ಕರವನ್ನು ಆಚರಿಸಿದರೆಂದು ಸಿ. ಐ. ಟಿ. ಯು. ಧಾರವಾಡ ಜಿಲ್ಲಾ ಸಮಿತಿಯು ಸಂಚಾಲಕರೊಬ್ಬರಾದ ಕಾಂ. ಎಂ. ಬಿ. ಕಟ್ಟಿ ತಿಳಿಸಿದರು.

ಹಾಸನ

ರೈತ ಹೋರಾಟಕ್ಕೆ ಬೆಂಬಲವಾಗಿ 11-6-1984 ರಂದು ಹಾಸನ ಜಿಲ್ಲೆಯ ಅನೇಕ ತೋಟಗಳಲ್ಲಿ ಸಿ. ಐ. ಟಿ. ಯು. ಗೆ ಸೇರಿದ ಕಾರ್ಮಿಕರು ಯಶಸ್ವಿ ಮುಷ್ಕರ ನಡಸಿದರು, ಬೆಳಿಗ್ಗೆ ಜಡಿ ಮಳೆ ಸುರಿಯುತ್ತಿದ್ದರೂ ಸುಮಾರು 131 ಜನ ಸಕಲೇಶಪುರ ತಲುಪಿ ತಹಸೀಲ್ದಾರರ ಕಚೇರಿಯನ್ನು ಬೆಳಗ್ಗೆ 9-30 ರಿಂದ 11 ಗಂಟೆಯವರೆಗೆ ಪಿಕೆಟಿಂಗ್ ಮಾಡಿದರು, ಪಿಕೆಟಿಂಗ್ ಮಾಡಿದವರನ್ನು ಪೋಲಿಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಬಂಧಿತರಲ್ಲಿ 34 ಮಹಿಳೆಯರು ಸೇರಿದ್ದರು, ಪಿಕೆಟಿಂಗ್ ನೇತೃತ್ವವನ್ನು ಕಾಂ. ವಿ. ಸುಕುಮಾರ್ ವಹಿಸಿದ್ದರು. ಪಿಕೆಟಿಂಗ್‌ಗೋಸ್ಕರ ಬಂದ ನೂರಾರು ಕಾರ್ಮಿಕರು ಬಸ್ಸುಗಳು ಸರಿಯಾದ ಸಮಯಕ್ಕೆ ಬರದೆ ಪಿಕೆಟಿಂಗ್ ನಡೆಸಿ ಬಂಧಿತರಾಗದೆ ಇದ್ದುದರಿಂದ ನಿರಾಶರಾದರು. ಬಂಧಿತರನ್ನು ಬಿಡುಗಡೆ ಮಾಡಿದ ನಂತರ ಪೋಲಿಸ್ ಠಾಣೆಯ ಹೊರಗೆ ನಿಂತಿದ್ದ ಕಾರ್ಮಿಕರೂ ಸೇರಿ ನೂರಾರು ಕಾರ್ಮಿಕರು ಸಂಘದ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿದರು. ಕಚೇರಿಯ ಮುಂದೆ ಸೇರಿದ್ದ ಕಾರ್ಮಿಕರನ್ನುದ್ದೇಶಿಸಿ ಕಾಂ. ವಿ. ಸುಕುಮಾರ್ ಮಾತನಾಡಿದರು.

ಹಾಸನದಲ್ಲಿ ಸಿ. ಐ. ಟಿ. ಯು.ಗೆ ಸೇರಿದ ಕಾಫಿಕ್ಯೂರಿಂಗ್, ಸಾಮಿಲ್ಸ್ ಮತ್ತು ಇತರೆ ಕಾರ್ಮಿಕರೆಲ್ಲ ಮುಷ್ಕರ ನಡೆಸಿದರು. ಬೇಲೂರಿನಲ್ಲಿ ಶ್ರೀ ಲಕ್ಷ್ಮಿ ಸಾಮಿಲ್ಸ್‌ನಲ್ಲಿ ಮುಷ್ಕರನಡೆದು ಇಡೀ ಕಾರ್ಖಾನೆ ಬಂದ್ ಆಯ್ತು.

ಅಕ್ಕಿ-ಆಲೂರ

11—6—1984 ರಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಕರೆಯ ಮೇರೆಗೆ ಹಾನಗಲ್ಲ ತಾಲ್ಲೂಕು ಕಚೇರಿ ಎದುರು ರೈತ ಕೂಲಿಗಾರರು ಅಕ್ಕಿ - ಆಲೂರಿನಿಂದ ತಾಲ್ಲೂಕು ಕಚೇರಿಗೆ ಮೆರವಣಿಗೆ ಹೋಗಿ ಪಿಕೆಟಿಂಗ್ ನಡೆಸಿದರು. ಪೋಲಿಸರು ಮಹಿಳೆಯರ ಸಮೇತ 190 ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಪಿಕೆಟಿಂಗ್‌ನ ಮುಖಂಡತ್ವವನ್ನು ರೈತ ಕೂಲಿಗಾರ ಸಂಘದ ಅಧ್ಯಕ್ಷರಾದ ಫಕೀರಪ್ಪ ಹೋತನಹಳ್ಳಿ, ಕಾರ್ಯದರ್ಶಿ ಎಂ. ಜಿನ್ನಾ, ಮೌಲಾನಾ ಕರ್ನಾಟಕಿ, ಡಾ. ನೀಲನಂದಾಜಿ, ವಿ. ಪಂಚಾಕ್ಷರಿ ವಹಿಸಿ ಬಂದನಕ್ಕೊಳಗಾದರು.

ಸವದತ್ತಿ

ದಿನಾಂಕ 11-6-84 ರಂದು ಸವದತ್ತಿಯಲ್ಲಿ ತಹಶೀಲದಾರರ ಕಚೇರಿಯ ಎದುರು ಸಾವಿರಾರು ರೈತರು ಪಿಕೆಟಿಂಗ್ ನಡೆಸಿ ಕಚೇರಿಯ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸಿದರು. ಸವದತ್ತಿ ಗಾಂಧಿ ಚೌಕದಲ್ಲಿ ಬಹಿರಂಗ ಸಭೆಯೊಂದನ್ನು ನಡೆಸಿದ ನಂತರ ರೈತರು ಕೈಯಲ್ಲಿ ಕೆಂಬಾವುಟಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತಾ ಮೆರವಣಿಗೆಯಲ್ಲಿ ಬಂದು ತಹಶೀಲದಾರರ ಕಚೇರಿಯ ಒಳಗೆ ನುಗ್ಗಿದರು. ಪೋಲೀಸರು ಮತಪ್ರದರ್ಶಕರನ್ನು ಬಂಧಿಸಲು ಒಪ್ಪಲಿಲ್ಲ. ರೈತರು ತಮ್ಮ ಮತಪ್ರದರ್ಶನವನ್ನು ತೀವ್ರಗೊಳಿಸಿದಾಗ ಪೋಲೀಸರು ಕೇವಲ 355 ರೈತರನ್ನು ಮಾತ್ರ ತಮ್ಮ ವಶಕ್ಕೆ ತೆಗೆದು ಕೊಂಡು ಸಂಜೆಗೆ ಬಿಡುಗಡೆ ಮಾಡಿದರು. ಕಾಮ್ರೆಡ್ ಎಸ್. ಎಚ್. ಕಪ್ಪಣ್ಣವರ, ನಿತ್ಯಾನಂದ ಸ್ವಾಮಿ, ಜಿ. ಬಿ. ತೊರಗಲ್ಲ್, ಎಸ್. ಬಿ. ಶಿಗ್ಲಿ, ಯಲ್ಲಪ್ಪ ಕಿಲ್ಲೆದಾರ, ಕೃಷ್ಣಾ ಶೆಟ್ಟಿ, ಮೊದಲಾದವರು ಬಂಧಿತರಲ್ಲಿ ಪ್ರಮುಖರು.

ಜುಲೈ 10 ರಿಂದ 17 ರವರೆಗೆ ಪಂಜಾಬ್ ಕುರಿತು ಪ್ರಚಾರ ನಡೆಯಲಿ

ಪಂಜಾಬಿನಲ್ಲಿ ಶಾಂತ ವಾತಾವರಣ ಉಂಟುಮಾಡುವ ಸಲುವಾಗಿ ಪಂಜಾಬಿನ ಜನತೆಯು ಪ್ರಜಾಪ್ರಭುತ್ವ ಬೇಡಿಕೆಗಳ ಪರಿಹಾರಕ್ಕೆ 1) ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಅಧ್ಯಕ್ಷತೆಯ ಸಮಿತಿಗೆ ನದಿ ನೀರಿನ ತಂಟೆಯನ್ನು ಒಪ್ಪಿಸುವುದು 2) ಚಂಡೀಗಡವನ್ನು ಪಂಜಾಬಿಗೆ ಒಪ್ಪಿಸುವುದು, ಹರಿಯಾಣಕ್ಕೆ ಹೊಸ ರಾಜಧಾನಿ ಕಟ್ಟಲು ಧನ ಸಹಾಯ ಮಾಡುವುದು 3) ಭಾಷೆ ಮತ್ತು ಸಂಲಗ್ನತೆಯ ಆಧಾರದಲ್ಲಿ ಹರಿಯಾಣ ಪಂಜಾಬಿನ ತಂಟೆ ಬಗೆಹರಿಸಲು ಒಂದು ಆಯೋಗ ನೇಮಿಸುವುದು.

ಪಂಜಾಬಿನ ಗಂಭೀರತೆಯನ್ನು, ಜಾತಿಯ ಸೌಹಾರ್ದತೆಯ ಅವಶ್ಯಕತೆಯನ್ನೂ ವಿವರಿಸಿ, ಸರಕಾರ ಮೇಲಿನ ಬೇಡಿಕೆಗಳನ್ನು ಜಾರಿಯಲ್ಲಿ ತರುವಂತೆ ಒತ್ತಾಯಿಸಲು ಜುಲೈ 10 ರಿಂದ 17ರವರೆಗೆ ಒಂದುವಾರ ಪಾರ್ಟಿಯು ನಿಲುವೆಯನ್ನು ಜನರಲ್ಲಿ ಪ್ರಚಾರ ಮಾಡಲು ವಾರಾಚರಣೆ ಆಚರಿಸಬೇಕೆಂದು ಸಿ ಪಿ. ಐ. (ಎಂ) ಕೇಂದ್ರ ಸಮಿತಿ ಕರೆಕೊಟ್ಟಿದೆ ಈ ಪ್ರಚಾರ ಕಾರ್ಯದಲ್ಲಿ ಇತರ ಪ್ರಜಾಪ್ರಭುತ್ವ ಮತ್ತು ದೇಶಪ್ರೇಮಿ ಜನರ, ಪಕ್ಷಗಳ ಸಹಾಯ ಪಡೆಯಬೇಕೆಂದು ಕೇಂದ್ರ ಸಮಿತಿ ತಿಳಿಸಿದೆ.

ಮೈಕೋ ಚುನಾವಣೆಯಲ್ಲಿ ಗೆಲುವು

ಬೆಂಗಳೂರಿನಲ್ಲಿರುವ ಮೈಕೋ ಕಾರ್ಖಾನೆಯ ಮಾಲಿಕರು ಸಿ. ಐ. ಟಿ. ಯು ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರ ವಿರುದ್ಧ ಕಾಂಗ್ರೆಸ್‌ನ ಎಫ್. ಎಂ. ಖಾನ್ ಅವರನ್ನು ಎತ್ತಿಕಟ್ಟಿ ಕಳೆದ ಮೂರು ವರ್ಷಗಳಿಂದ ಕಾರ್ಮಿಕರಲ್ಲಿ ಅಸಮಾಧಾನ ಉಂಟುಮಾಡುವುದಷ್ಟೇ ಅಲ್ಲ, ಗೂಂಡಾಗಿರಿ ನಡೆಸಿದ್ದರು ಕೊನೆಗೆ ಹೈಕೋರ್ಟಿನ ಆದೇಶದ ಮೇರೆಗೆ ಹೋದ ತಿಂಗಳು ಯೂನಿಯನಿಗೆ ಗೌರವ ಸದಸ್ಯತ್ವ ಕುರಿತು ಚುನಾವಣೆ ನಡೆಯಿತು. ಆಗ ಖಾನ್ ಅವರು ಸೋತು ಸೂರಿಯವರು ಗೆದ್ದಿದ್ದರು ತಾ. 20 ರಂದು ಯೂನಿಯನ್ ಪದಾಧಿಕಾರಿಗಳ ಚುನಾವಣೆ ನಡೆದು, ಸೂರ್ಯನಾರಾಯಣರಾವ್ ಅಧ್ಯಕ್ಷರಾಗಿಯೂ, ನರಸಿಂಹಮೂರ್ತಿ ಮತ್ತು ಶೇಷಪ್ಪ ಉಪಾಧ್ಯಕ್ಷರಾಗಿಯೂ, ಎನ್. ವೀರಾಸ್ವಾಮಿ ಪ್ರಧಾನ ಕಾರ್ಯದರ್ಶಿ, ಜಯರಾಂ ಉಪಕಾರ್ಯದರ್ಶಿ ಮತ್ತು ಶಂಕರೇಗೌಡ ಖಜಾಂಚಿಯಾಗಿ ಒಂದು ಸಾವಿರಕ್ಕೂ ಹೆಚ್ಚು ಮತಗಳಿಸಿ ಆರಿಸಿ ಬಂದಿದ್ದಾರೆ. ಮೈಕೋ ಮಾಲಿಕರ ಮತ್ತು ಎಫ್. ಎಂ. ಖಾನ್‌ರ ಗೂಂಡಾಗಿರಿಯನ್ನು ಸೋಲಿಸಿದ್ದಕ್ಕಾಗಿ ಕರ್ನಾಟಕ ರಾಜ್ಯ ಸಿ. ಐ. ಟಿ. ಯು ಮೈಕೋ ಕಾರ್ಮಿಕರನ್ನು ಅಭಿನಂದಿಸುತ್ತದೆ.

ವಿಮುಕ್ತಿ ಕಾಣದ ಗ್ರೆನೆಡಾ

1983 ರ ಡಿಸೆಂಬರ್ ಒಳಗಾಗಿ ತನ್ನ ಪಡೆಗಳನ್ನು ಹಿಂತೆಗೆಯುವ ಆಶ್ವಾಸನೆಗಳನ್ನು ನೀಡಿದರೂ ಅಮೆರಿಕಾ ಸುಮಾರು 1500 ಮಂದಿ ಸೈನಿಕರನ್ನು ಇನ್ನೂ ಗ್ರೆನೆಡಾದಲ್ಲೇ ಇರಿಸಿದೆ. ಅದಲ್ಲದೆ ಪೆಂಟಗಾನ್ ಈಗ ಈ ದ್ವೀಪದಲ್ಲಿ ಅಂತರಿಕ ಮತ್ತು ಪ್ರಾದೇಶಿಕ ಸುಭದ್ರತಾ ಪಡೆಯೊಂದನ್ನು ಸ್ಥಾಪಿಸುವ ಯೋಜನೆಯೊಂದನ್ನು ಕಾರ್ಯಗತಗೊಳಿಸಲು ಯೋಜಿಸುತ್ತಿದೆ. ಅದರಲ್ಲಿ ಸೈಂಟ್ ವಿನ್ಸೆಂಟ್, ಸೈಂಟ್ ಲೂಸಿಯಾ, ಡೊಮಿಫಿಕಾ, ಆಂಟಿಗುವಾ ಸೈಂಟ್ ಕಿಟ್ಸ್ ಮತ್ತು ನೆವಿಸ್ ದ್ವೀಪಗಳ ಪೋಲೀಸರನ್ನೂ ಅದರಲ್ಲಿ ಒಳಪಡಿಸಲು ಉದ್ದೇಶಿಸಲಾಗಿದೆ. ಈ ಪೂರ್ವ ಕ್ಯಾರಿಬಿಯನ್ ರಾಷ್ಟ್ರಗಳ "ಮನವಿ"ಯೇ 1983 ರ ಅಕ್ಟೋಬರ್‌ನಲ್ಲಿ ಗ್ರೆನೆಡಾದ ಮೇಲಿನ ದಾಳಿಗೆ ನೆಪವಾಯಿತು.

ಸಂ. ರಾ. ಅಮೆರಿಕಾ ಗ್ರೆನೆಡಾದಲ್ಲಿ ಇರಿಸಿರುವ ದಮನಕಾರಿ ಪಡೆಗಳ ಘಟಕಗಳನ್ನು ಪಹರೆ ನೌಕೆಗಳು, ವೇಗವಾಗಿ ಚಲಿಸುವ ಯಾಂತ್ರಿಕ ದೋಣಿಗಳು, ಜೀಪ್‌ಗಳು ಹಾಗೂ ಎಂ-16 ಬಂದೂಕುಗಳಿಂದ ಸಜ್ಜುಗೊಳಿಸಲಾಗುವುದು.

[1ನೇ ಪುಟದಿಂದ]

ಒಂದು ರೀತಿಯ ಮೋಕ್ಷ, ಪರಿಹಾರ ಸಿಕ್ಕುತ್ತದೆ.

ಅಂದರೆ, ಸಮಸ್ಯೆಗಳಿಗೆ ಪರಿಹಾರ ಕಾಣಬೇಕಾದರೆ ಸಮಸ್ಯೆಗಳಿರುವವರು ಸರಕಾರದ ಅಧಿಕಾರಿಗಳ ಹಿಂದೆ ದೀರ್ಘ ಕಾಲ ಓಡಾಡಲು ತಯಾರಿರಬೇಕು, ಅಥವ "ದಳ್ಳಾಳಿ'ಗಳ ಕೈಗೆ ತಮ್ಮ ಸಮಸ್ಯಾ ಪತ್ರಗಳನ್ನು ಕೊಟ್ಟು, ಸಲಾಂ ಹೊಡೆದು ಕುಳಿತುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗ್ಡೆಯವರ ಸರಕಾರದ ಮಂತ್ರಿಗಳು ಪ್ರತಿಯೊಬ್ಬರೂ ತಾವು "ಲಂಚ ಗುಳಿತನದ ವಿರುದ್ಧ ಹೋರಾಡುತ್ತಿದ್ದೇವೆ" ಎನ್ನುತ್ತಾರೆ, ಹೆಚ್ಚಿನ ಮಟ್ಟಿಗೆ ಲಂಚದಿಂದ ತಾವು ದೂರವಿರುತ್ತಾರೆ.... ಆದರೆ ತಮ್ಮ ಆಡಳಿತವನ್ನು ಲಂಚದಿಂದ ದೂರ ಮಾಡಲು ಸಾಧ್ಯವಾಗಿದೆಯೇ ಅವರಿಗೆ ? ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಆಡಳಿತದಲ್ಲಿರುವ "ನಿಧಾನ ತಂತ್ರ" "ವಿಳಂಬ ತಂತ್ರ" ವನ್ನು ತೆಗೆದು ಹಾಕದಿದ್ದರೆ ಲಂಚ ಗುಳಿತನ ನಿರ್ಮೂಲವಾಗುವುದು ಹೇಗೆ ? ಆಡಳಿತವನ್ನು ಚಲನೆಯಾಗುವಂತೆ ಮಾಡದಿದ್ದರೆ, ಇನ್ನೂ ಹೆಚ್ಚು ಹೆಚ್ಚು ಚಲನೆಗೆ ಗುರಿ ಪಡಿಸದಿದ್ದರೆ, ಲಂಚಗುಳಿತನ ತೊಲಗುವುದು ಹೇಗೆ ?

ಎಂ. ಎಲ್. ಎ. ಆಗಿ ನನ್ನ ಒಂದು ಅನುಭವವನ್ನು ಇಲ್ಲಿ ಹೇಳ ನಾನು ವಿರಮಿಸುತ್ತೇನೆ : ಕಳೆದ 8 ತಿಂಗಳುಗಳಿಂದ ನಾನು "ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಲಂಬಾಣಿ ತಾಂಡ್ಯದ 200 ಮಂದಿ ದಸ್ತಗಿರಿಯಾಗಿ ಅವರ ಮೇಲೆ ಹಾಕಿದ ಕ್ರಿಮಿನಲ್ ಕೇಸುಗಳನ್ನು ಹಿಂತೆಗೆದು ಹಾಕಲು ಪ್ರಯತ್ನ ಮಾಡುತ್ತಾ ಬಂದಿದ್ದೇನೆ. ಹೂವಿನ ಹಡಗಲಿಯ ಶಾಸಕರು ಮತ್ತು ಮಂತ್ರಿಗಳಾದ ಎಂ. ಪಿ. ಪ್ರಕಾಶರು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಮುಖ್ಯಮಂತ್ರಿಗಳಲ್ಲಿ ಹತ್ತು ಹನ್ನೆರಡು ಭಾರಿ ಅರಿಕೆ ಮಾಡಿದ್ದೆ. ಅವರು ಖಂಡಿತವಾಗಿ ಈ ಕೇಸುಗಳನ್ನು ಹಿಂತೆಗೆಸುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಹತ್ತು ಬಾರಿ ನಾನು ಪತ್ರ ಮುಖೇನ ಈ ವಿಷಯವನ್ನು ನೆನಪು ಮಾಡಿದಾಗ ಕೂಡಲೇ ಪರಿಶೀಲಿಸಲಾಗುವುದು ಎಂದು ಬರಹ ಮೂಲಕ ಉತ್ತರ ಕೊಡುತ್ತಾ ಬಂದಿದ್ದಾರೆ.

ಆದರೆ ಪರಿಹಾರ ಸಿಗಲಿಲ್ಲ. ಆ ಲಂಬಾಣಿ ತಂಡದವರ ಮೇಲಿನ ಕೇಸು ಹಾಗೆಯೇ ಅವ್ಯಾಹತವಾಗಿ ನಡೆಯುತ್ತಲೇ ಇದೆ...... ಮುಖ್ಯಮಂತ್ರಿಗಳು "ಆ ಕೇಸುಗಳನ್ನು ಹಿಂತೆಗೆಯುವೆ" ಎಂದು ಭರವಸೆಯನ್ನು ಕೊಡುತ್ತಲೇ ಇದ್ದಾರೆ.

ಇದೀಗ ಮೇ ತಿಂಗಳ ಕೊನೆಗೆ ನನ್ನ ಕ್ಷೇತ್ರದ ಸರ್ಕಲ್ ಇನ್ಸ್‌ಪೆಕ್ಟರಿಗೆ ಗೃಹಶಾಖೆಯಿಂದ ಒಂದು ಪತ್ರಹೋಗಿ "ಅಕ್ಷ ಉಳ್ಳಾಲದಲ್ಲಿ ಲಂಬಾಣಿ ತಾಂಡ ಎಲ್ಲಿದೆ?" ಎಂದು ಪ್ರಶ್ನೆ ಕೇಳಲಾಗಿದೆ. ....ಅವರು ನನ್ನನ್ನು ಕೇಳಿ ಅಲ್ಲಿ ಉಳ್ಳಾಲದಲ್ಲಿ ಲಂಬಾಣಿ ತಾಂಡ ಇಲ್ಲ, ಅದು ಇರುವುದು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ಎಂಬ ತಾಲ್ಲೂಕಿನಲ್ಲಿ ಎಂದು ಸರಕಾರಕ್ಕೆ ತಿಳಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗ್ಡೆಯವರ ಸರಕಾರ "ಇನ್ನೂ ಹೆಚ್ಚು ಚಲನೆ" ಯಿಂದ ನಡೆಯಬೇಡವೇ ?

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L 56, K V. Temple Street, Sultanpet, B-53. Phone : 24154

Editor : P. Ramachandra Rao Managing Editor : N. K. Upadhyaya